Sri J. B. MALLARADHYA.—On the motion moved by the Hon'ble Speaker yesterday in regard to the report of the Committee in regard to the private Member's Bill and Resolution, we have agreed and mentioned dates. The House agreed for the allotment of the four days for the non-official business and it is also agreed that this specific resolution is to be discussed on the floor of this House. In view of this, I do not know whether it is correct in restricting the duration of the business. We have agreed for four days and the House has given its consent. The Government may find it inconvenient. Now, that we have agreed to this, it would not be possible to change it. There is lot of substance in what my friend Sri Srinivasa Shetty has said.

Mr. DEPUTY SPEAKER.—I will examine all the point and I want some time.

Sri G. VENKATAI GOWDA.--We do not want any ruling from the Chair. What is there to consider? I want to know whether there is any motion from the Government ; or changing the Time Table? If that is so, we want to speak on that point.

Sri B. D. JATTI.—Sir, when a point of order is raised and when the Hon'ble Speaker says that he wants some time to consider, what is the meaning in not giving time to the Speaker?

Mr. DEPUTY SPEAKER.—I will take all this into consideration.

NON-OFFICIAL BUSINESS.

(*a*) Bills.

Mysore Police (Amendment) Bill 1961. Leave to Introduce.

Sri MAHMOOD SHARIFF (Broadway).—Sir, I beg leave to introduce the Mysore Police (Amendment) Bill, 1961.

Mr. DEPUTY SPEAKER.—Has the Member leave of the House to introduce the Bill?

HON'BLE MEMBERS.—Yes.

Mr. DEPUTY SPEAKER.—The Bill is introduced.

NON-OFFICIAL RESOLUTION

Re.—Prohibiting Ministers to carry out any propagandist activity two months prior to General Elections—Debate (*contd*).

†ಶ್ರೀ ಕೆ. ಪಿ. ರೇವಣಸಿದ್ದಪ್ಪ.—ರತ್ನ ಸಿಂಹಾಸನದಂಥಿರುವ ಅಧ್ಯಕ್ಷ ಪೀಠದಲ್ಲಿರುವ ಅಧ್ಯಕ್ಷರೆ, ನಮ್ಮ ಇಂಡಿಯಾ ದೇಶದಲ್ಲಿರುವ ಪ್ರಜಾಪ್ರಭುತ್ವ ಯಾವ ಮಾದರಿಯಾದುದು, 15 ವರ್ಷವಾದರೂ ನಮಗೆ ಅರ್ಥವಾಗಿಲ್ಲ. ನಮ್ಮದು ಇಂಗ್ಲೆಂಡ್, ಅಮೇರಿಕ ಮಾದರಿಯದೇ ಅಥವಾ ರಷ್ಯಾ ಮಾದರಿಯದೋ ಇತ್ತೀಚೆಗೆ ನೋಡಿದರೆ, ನಮ್ಮದು ರಷ್ಯ ತರಹಾನೋ ಎಂದು ಕಾಣುತ್ತಾ ಇದೆ. 150 ಜನ ಸಂಖ್ಯೆಯ ಬಲ ಇದ್ದಾಕ್ಷಣ್ಯಕ್ಕೇ, ನೈತಿಕವಾಗಿ ವಿರೋಧ ಪಕ್ಷದವರು ಮಾಡಿದ ಅನೇಕ ಸಲಹೆಗಳಿಗೆ, ರಚನಾತ್ಮಕವಾಗಿ ಮಾಡಿದ ಕೆಲವು ಟೀಕೆಗಳಿಗೆ, ಸರ್ಕಾರದ ಮನೋಭಾವ ನೋಡಿದರೆ, ಇದು ರಷ್ಯಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಹೋಲಸಬಹುದಾಗಿದೆ. ಈಗ ಅಧ್ಯಕ್ಷರು ಜರ್ಮನಿಗೆ ಹೋಗಿದ್ದಾರೆ. ತಾವೂ ಸ್ವಲ್ಪ ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ನೋಡಿಕೊಂಡು ಬನ್ನಿ.

ಉಪಾಧ್ಯಕ್ಷರು.—ಯಾವ ವಿಷಯದ ಮೇಲೆ ಮಾತನಾಡುತ್ತಿದ್ದೀರಿ? ದಯವಿಟ್ಟು ರೆಜಲೂಶನ್ ಮೇಲೆ ಮಾತನಾಡಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೊರದೇಶಗಳಲ್ಲಿ ಮಂತ್ರಿಗಳು ತಮ್ಮ ಪಾರ್ಟಿ ಕ್ಯಾಂಡಿಡೇಟುಗಳಿಗೆ ಕ್ಯಾನ್‌ವಾಸ್ ಮಾಡುವುದಕ್ಕೆ ಹೋದರೆ, ತಮ್ಮ ಸ್ವಂತ ಕಾರನ್ನೇ ಉಪಯೋಗಿಸುತ್ತಾರೆ. ನಮ್ಮ ದೇಶದಲ್ಲಿಯಾದರೋ ಕ್ಯಾನ್‌ವಾಸಿಗೆ ಹೋದಾಗ, ಪಾರ್ಟಿ ಮೀಟಿಂಗಿಗೆ ಹೋದಾಗ, ಬಂದು ಬಳಗದವರ ಮದುವೆ, ಮುಂಜಿ, ತಿಥಿಗೆ, ಅಥವ ತಮ್ಮ ಸ್ವಂತ ಕೆಲಸಕ್ಕೆ ಹೋದರೆ, ಸರ್ಕಾರಿ ಕಾರನ್ನು ಉಪಯೋಗಿಸುವುದರಿಂದ, ಸಾರ್ವಜನಿಕ ಹಣ ದುರುಪಯೋಗವಾಗುತ್ತದೆ, ಸಭಿಕರಿಗೆ ಇದು ಚೆನ್ನಾಗಿ ಮನದಟ್ಟಾಗಿರುವ ವಿಷಯ ಮಂತ್ರಿಗಳಾದರೂ ಕೂಡ ನಾನು ಒಂದು ದೇಶದ ಮಂತ್ರಿಯಾಗಿದ್ದೇನೆ, ನಾನು ದೇಶಕ್ಕೆ ಸೇರಿದವನು. ದೇಶದಲ್ಲಿ ಕಷ್ಟ ಸುಖ ಒಂದೇ ಸಮನಾಗಿರಬೇಕು ಎಂಬ ಭಾವನೆಯಿಂದ ಕೂಡಿರಬೇಕು. ಇತ್ತೀಚೆಗೆ ನೋಡಿದರೆ ಯಾವ ಒಬ್ಬ ಮಂತ್ರಿಗೂ ಈ ಭಾವನೆ ಇಲ್ಲವಾಗಿದೆ. ಈ ನಾಲ್ಕು ವರ್ಷದ ಅನುಭವ ತೆಗೆದುಕೊಂಡರೆ, ಮುಕ್ಕಾಲು ಭಾಗ ಮಂತ್ರಿಗಳು ಪ್ರತಿವಾರ, ಪ್ರತಿತಿಂಗಳು ಅವರವರ ಕ್ಷೇತ್ರಕ್ಕೆ ಹೆಚ್ಚಾಗಿ ಹೋಗುತ್ತಿದ್ದಾರೆ, ಲೆಕ್ಕ ಕೊಡುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಕೊಡಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರವರ ಕ್ಷೇತ್ರಕ್ಕೆ ಹೋಗುವ ಉದ್ದೇಶವಾದರೂ ಮುಂದೆ ಬರತಕ್ಕಂಥ ಎಲೆಕ್ಷನ್ನಿನಲ್ಲಿ ತಮ್ಮ ಪ್ರಭಾವವನ್ನು ತಮ್ಮ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ತಮ್ಮ ಗ್ರೂಪಿನವರಿಗೆ ಬೀರುವುದಕ್ಕೋಸ್ಕರ; ತಮ್ಮ ಕಾಂಗ್ರೆಸ್ ಪಾರ್ಟಿಯಿಂದ ಯಾರು ಎಲೆಕ್ಷನ್ನಿಗೆ ನಿಂತಿರುತ್ತಾರೆಯೋ, ಅವರನ್ನು ಗೆಲ್ಲಿಸುವುದಕ್ಕೋಸ್ಕರ ಹೋಗುವುದಿಲ್ಲ ಮುಂದಿನ ಮಹಾ ಚುನಾವಣೆಯಾದ ಮೇಲೆ ತಾವು ಮಂತ್ರಿಗಳಾಗುವುದಕ್ಕೆ, ಚೀಫ್ ಮಿನಿಸ್ಟರಾಗುವುದಕ್ಕೆ ಯಾವ ಗ್ರೂಪಿನವರು ಸಹಾಯಕರಾಗುತ್ತಾರೋ, ಅಂಥ ಕಾಂಗ್ರೆಸಿಗರಿಗೆ ಕ್ಯಾನ್‌ವಾಸ್ ಮಾಡುವುದಕ್ಕೆ ಹೋಗುತ್ತಾರೆ.

ಒಂದು ಕಾಯರ್ ಬೋರ್ಡ್ ರಚನೆ ತೆಗೆದುಕೊಳ್ಳೋಣ ಅದಕ್ಕೆ ಮೆಂಬರುಗಳನ್ನು ನೇಮಿಸುವಾಗ ಅವರಿಗೆ ಕಾಯರ್‌ನಲ್ಲಿ ಅನುಭವವೇನು, ವಿದ್ಯಾಅರ್ಹತೆಯೇನು, ಕಾಯರ್ ಕೈಗಾರಿಕೆಯಲ್ಲಿ ಕೆಲಸಮಾಡುತ್ತಿದ್ದಾರೆಯೇ ಎಂದು ಒಂದನ್ನು ನೋಡುವುದಿಲ್ಲ. ಒಂದು ಎಕರೆ ಜಮೀನೂ ಇಲ್ಲದ, ಒಂದು ತೆಂಗಿನ ಗಿಡವಿಲ್ಲದ, ಒಂದು ಕಾಸು ಅನುಭವವಿಲ್ಲದವರನ್ನು ಬೋರ್ಡಿಗೆ ಹಾಕುತ್ತಾರೆ. ಇನ್ನೊಂದು ಉಧಾಹರಣೆ ಕೊಡುವುದಾದರೆ ಹಿಂದೆ ಎಲೆಕ್ಷನ್ನಿನಲ್ಲಿ ಸೋತವರನ್ನು ಎಲೆಕ್ಟ್ರಿಸಿಟಿ ಬೋರ್ಡ್, ಎಕಾನಮಿ ಅಂಡ್ ರಿಸೋರ್ಸ್‌ಸ್ ಕಮಿಟಿ, ಕುಶಲ ಕೈಗಾರಿಕೆ ಬೋರ್ಡ್ ಮುಂತಾದುದಕ್ಕೆ ನೇಮಿಸಿದ್ದಾರೆ. ಆಯಾ ತಾಲ್ಲೂಕಿನಲ್ಲಿ, ಆಯಾ ಡಿಸ್ಟ್ರಿಕ್ಟಿನಲ್ಲಿ ಇಂಥವರು ಪ್ರಭಾವ ಬೀರಲು ಈಗಾಗಲೇ ಏರ್ಪಾಡು ಮಾಡಿದ್ದಾರೆ ನೀವೇ, ವಿರೋಧ ಪಕ್ಷ ಚೆನ್ನಾಗಿ ಬೆಳೆಯಬೇಕು, ಹಾಗೆ, ಹೀಗೆ ಎಂದು ಹೇಳುತ್ತೀರ. ಈ ಸಂಧರ್ಭದಲ್ಲಿ ಇನ್ನೊಂದು ಹೇಳಬೇಕು. ವಿರೋಧಪಕ್ಷದ ಒಳಹೊಕ್ಕು, ವಿರೋಧಪಕ್ಷದಲ್ಲಿ ಭಿನ್ನಾಭಿಪ್ರಾಯ ತರುವುದಕ್ಕೆ ಏರ್ಪಾಡು ಮಾಡುತ್ತಿದ್ದೀರೆಂದು ನಮ್ಮ ಗಮನಕ್ಕೆ ಬಂದಿದೆ; ಇದು ತುಂಬಾ ಅನ್ಯಾಯ. ಈ ಅಧಿಕಾರಿಯನ್ನು ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿ, ಈ ಅಧಿಕಾರಿಯನ್ನು "ನನ್ನ ಚುನಾವಣೆ ಕ್ಷೇತ್ರಕ್ಕೆ, ನನ್ನ ಡಿಸ್ಟ್ರಿಕ್ಟಿಗೆ" ವರ್ಗಮಾಡಿ, ಈ ತಹಸೀಲ್‌ದಾರನನ್ನು ಬದಲಾಯಿಸಿ, ಈ ಅಸಿಸ್ಟೆಂಟ್ ಕಮಿಷನರನ್ನು ಬೆಂಗಳೂರು ಹೆಡ್ ಆಫೀಸಿಗೆ ಹಾಕಿಬಿಡಿ ಎಂದು ಇನ್‌ಫ್ಲುಯನ್ಸ್ ಬರುತ್ತಿದೆ. ಇಂಥ ಪ್ರಭಾವದಿಂದ ಅಧಿಕಾರಿಗಳಿಗೆ ತಲೆನೋವಾಗಿದೆ, ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿ ಹೇಳುವುದಕ್ಕೆ ಅಸಾಧ್ಯವಾಗಿದೆ. ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಏನು ಕಷ್ಟವಾಗುತ್ತಿದೆಯೆಂದು ಡೀಟೇಲ್ಸ್ ತರಿಸಿಕೊಂಡು, ನಾನು ಹೇಳುವುದು ಸಮರ್ಪಕವಾಗಿದ್ದರೆ ಅಧಿಕಾರ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು; ಇಲ್ಲದಿದ್ದರೆ ನಿಮಗೆ ಕೆಟ್ಟ ಹೆಸರು ಬರುತ್ತದೆ

ನೀವು ಮುಂದೆ ಪಾರ್ಲಿಮೆಂಟಿಗೆ ಹೋಗುತ್ತೀರೆಂದು ಹೇಳುತ್ತಿದ್ದಾರೆ; ಹೋಗುವಾಗ ಇದನ್ನು ಖರಿಮಾಡಿಹೋಗಿ.

ಶ್ರೀ ಬಿ. ಡಿ. ಜತ್ತಿ.—ನನ್ನನ್ನು ಜೊತೆಗೆ ಹಾಕಬೇಕೆನ್ನುತ್ತೀರಾ?

ಶ್ರೀ ಕೆ. ವಿ. ರೇವಣಸಿದ್ಧಪ್ಪ.—ವದಂತಿ ಹೇಳುತ್ತಿದ್ದೇನೆ. ಈ ರೋಪದೋಷವನ್ನು ಸರಿಮಾಡಿ ಒಳ್ಳೆಯ ಹೆಸರು ತೆಗೆದುಕೊಳ್ಳಿ ಚೇರಲು ರಾಡರಲು ಜಂಚಿ ರಾಜ್ಯವೇರಲು, etc. ಎಂದು ಕೈವಾರದ ನಾರಾಯಣಪ್ಪ ಬರೆದಿದ್ದಾನೆ; ಪುಸ್ತಕದಲ್ಲಿದೆ. ಚೇರರು ರಾಜ್ಯವನ್ನು ಜಯಿಸಿ ರಾಜ್ಯ ಆಳುವವರು ಎಂದು ಅದರ ಅರ್ಥ. ಪೂರ್ವಕ್ಕೆ ಬಹಳ ವರ್ಷಗಳ ಹಿಂದೆಯೆ ಇದನ್ನು ಬರೆದು ಬಿಟ್ಟಿದ್ದಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಅನಾವಶ್ಯಕವಾಗಿ ಆಡಳಿತದಲ್ಲಿ ಕೈಹಾಕಬೇಡಿ ನೀವು ಒಂದು ತಾಲ್ಲೂಕಿಗೆ, ಹಳ್ಳಿಗೆ ಹೋದರೆ, ನಿಮ್ಮ ಹಿಂದೆ ಮುಂದೆ, ಒಯ್ಯಲಿ ಬಿಡಲಿ, ನೂರಾರು ಜನ ಸುತ್ತುತ್ತಿರುತ್ತಾರೆ, ಬೆಲ್ಲಕ್ಕೆ ನೊಣ ಮುತ್ತಿದಹಾಗೆ ನಿಮಗೆ ಮುತ್ತಿರುತ್ತಾರೆ. ವಿರೋಧ ಪಕ್ಷದವರ ಸ್ಥಿತಿ ಹೇಗಿದೆ ಎಂದರೆ ಕಟ್ಟಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಅವಶ್ಯಕತೆ ಎನ್ನುವಹಾಗಿದೆ. ಅಧಿಕಾರವಿಲ್ಲದಿದ್ದರೆ ಜನ ಬರುವುದಿಲ್ಲ ಹೀಗಾಗಬಾರದು. ಮಂತ್ರಿಗಳು ಆಗಿರಲಿ, ಅಲ್ಲದಿರಲಿ, ಈ ಸಭೆಯ ಮೆಂಬರಾಗಿದ್ದರೆ ಎಷ್ಟು ಗೌರವ ಕೊಡುತ್ತಿದ್ದೇವೋ ಅಷ್ಟೇ ಕೊಡಬೇಕು. ನಮ್ಮಲ್ಲಿ ಇದೊಂದು ದುರ್ದೈವ ಒಂದು ಅಧಿಕಾರದಲ್ಲಿದ್ದಾಕ್ಷಣ, ಅತನಲ್ಲಿ ಗುಣ ಹೆಚ್ಚಾಗಿರುವುದಿಲ್ಲ ಎಂದುಕೊಳ್ಳುತ್ತೇವೆ. ಅಧಿಕಾರವಿಲ್ಲದಿರುವಾಗ ಒಬ್ಬ ಮನುಷ್ಯನ ಗುಣಕ್ಕೆ ಬೆಲೆಕೊಡುವ ಸ್ನೇಹಿತರು ಬಹಳ ವಿರಳ. ಲಾಭ ಪಡೆಯುವ ಉದ್ದೇಶದಿಂದ ಜತ್ತಿಯವರು ಚೀಫ್ ಮಿನಿಸ್ಟರಾಗಿರುವವರೆಗೆ ಅವರನ್ನು ಹೊಗಳಿಕೊಂಡು ಇರುವುದು ತಪ್ಪು. ಅವರು ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ ಅವರ ಗುಣಗಳಿಗೆ ಮರ್ಯಾದೆ ಸನ್ಮಾನಗಳನ್ನು ತೋರಿಸಬೇಕು ಅಧಿಕಾರಬಿಟ್ಟ ಕೂಡಲೇ ಸನ್ಮಾನ ಮಾಯವಾಗಿ ಹೋಗುತ್ತದೆ. ನಾನು ಸನ್ಮಾನಕ್ಕೆ ಹಿಗ್ಗುವುದಿಲ್ಲ. ಇಲ್ಲವೆ ಬಗ್ಗುವುದಿಲ್ಲ, ನಮ್ಮ ಸ್ನೇಹಿತರಾದ ಶ್ರೀಮಾನ್ ಜತ್ತಿಯವರು ಈ ಮನೋಭಾವ ಇಟ್ಟುಕೊಂಡು, ಈ ರೆಸಲ್ಯೂಶನ್ನಿನ ಪ್ರಕಾರ ಅಧಿಕಾರದಿಂದ ನಿವೃತ್ತಿಯಾಗುವುದು ಒಳ್ಳೆಯದು.

ಸ್ವಾಮಿ, ಇವರ ಕೈಯಲ್ಲಿ ದೇಶದ ಆಡಳಿತ ಇರುವುದರಿಂದ ಇವರು ಏನೂ ಬೇಕಾದರೂ ಮಾಡಬಹುದು. ಆಡಳಿತ ಪಕ್ಷ ತನ್ನಲ್ಲಿ 150 ಸಂಖ್ಯಾಬಲವಿದೆಯೆಂದು ಹೇಳಿಕೊಂಡು ಈ ದಿವಸ ಬೇಕಾದನ್ನೆಲ್ಲೋ ಮಾಡಬಹುದು. ಆದರೆ ಅವರು ಅನ್ಯಾಯ-ಅಧರ್ಮಗಳು ಒಂದಲ್ಲಾ ಒಂದು ದಿವಸ ಅವರನ್ನು ನೈತಿಕ ಪರಿಸ್ಥಿತಿಗೆ ತಲೆಬಾಗುವಂತೆ ಮಾಡಿರಲು ಸಾಧ್ಯವೇ ಇಲ್ಲ. ಈಗಾಗಲೇ ಅನೇಕ ಮಂತ್ರಿಗಳು ತಾಲ್ಲೂಕ್ ಬೋರ್ಡಿನಿಂದ ಹಿಡಿದು—ಒಂದು ಸೊಸೈಟಿಯ ಮೊದಲುಗೊಂಡು ಪ್ರತಿಯೊಂದು ಸಂಸ್ಥೆಯಲ್ಲೂ ತಮ್ಮ ಪಾರ್ಟಿಯ ಜನರನ್ನು ನಾಮಕರಣ ಮಾಡಿರುತ್ತಾರೆ. ಬೇರೆ ಪಾರ್ಟಿಗೆ ಸೇರಿರತಕ್ಕ ಸದಸ್ಯರಿಗೆ ಎಲ್ಲಿಯೂ ಅವಕಾಶ ಕೊಟ್ಟಿಲ್ಲ. ಅಂಥ ನಿದರ್ಶನಗಳಿದ್ದರೆ ಸರ್ಕಾರದವರು ಹೇಳಲಿ—ಅದಕ್ಕೆ ನಾನು ಒಪ್ಪುತ್ತೇನೆ. ಇದರ ಜೊತೆಗೆ ಮಂತ್ರಿಗಳು ಪ್ರವಾಸ ಹೋದ ಕಾಲದಲ್ಲಿ ಜನರಿಗೆ ಆಶ್ವಾಸನಗಳನ್ನು ಕೊಡುವುದಕ್ಕಂತೂ ಮಿತಿಯೇ ಇಲ್ಲ. ಯಾರು ಏನೂ ಕೇಳಿದರೂ 'ಆಗಲಿ' ಮಾಡಿಸಿಕೊಡೋಣ, ಎಂತ ಹೇಳಿಬಿಟ್ಟುಬಿಡುತ್ತಾರೆ. ಆ ವಿಚಾರ ಒಂದು ಬರವಣಿಗೆಯಾದರೂ ಇರುತ್ತದೆಯೋ ಎಂದರೆ ಅದಿಲ್ಲ. ಎಲ್ಲಾ ಬಾಯಿಮಾತಿನಲ್ಲೇ ನಡೆದುಬಿಡುತ್ತೆ, ಯಾರು ಒಂದು ಅಣೆಕಟ್ಟನ್ನು ಕೇಳಲಿ, ಯಾರು ಒಂದು ಆಸ್ಪತ್ರೆ ಕೇಳಲಿ, ಯಾರು ಒಂದು ಕಾಲೇಜನ್ನು ಕೇಳಲಿ, ಯಾರು ಒಂದು ಇಂಡಸ್ಟ್ರೀ ಸ್ಥಾಪಿಸಬೇಕೆಂದು ಕೇಳಲಿ,—ಎಲ್ಲದಕ್ಕೂ ಅಸ್ತು ಎಂದು ಹೇಳಿಬಿಡುತ್ತಾರೆ. ಆದರೆ ಆ ಆಶ್ವಾಸನಕ್ಕೆ ಬೆಲೆಯೇನೂ ಇರುವುದಿಲ್ಲ. ಈ ಹಿಂದೆ ಇದೇ ಮಂತ್ರಿಮಂಡಲದಲ್ಲಿರುವ ಶ್ರೀಮಾನ್ ಚನ್ನಬಸಪ್ಪನವರೂ ಮತ್ತು ವೀರಣ್ಣಗೌಡರೂ ನಮ್ಮ ತಾಲ್ಲೂಕಿಗೆ ಬಂದಿದ್ದಾಗ ಅಲ್ಲಿ 28 ಕೆರೆಗಳು ಒಡೆದುಹೋಗಿದ್ದ ಸಂದರ್ಭದಲ್ಲಿ ಅವುಗಳನ್ನು ಬೇಗ ಜೀರ್ಣೋದ್ಧಾರ ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದಕ್ಕೆ ಸರ್ಕಾರದವರು ಈಗಲೇ ಹುಕುಂ ಮಾಡಿಬಿಡುತ್ತಾರೆ, ಕೆಲಸ ನಡೆಯಲು ಈಗಲೇ ಸರ್ಕಾರದವರು ಆರ್ಡರ್

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಮಾಡಿಬಿಡುತ್ತಾರೆಂತ ಹೇಳಿ ಬಂದರು. ಎಷ್ಟೋ ದಿವಸಗಳನಂತರ ಏನು ಸ್ವಾಮಿ ಹೀಗೆ ಮಾಡಿದಿರಲ್ಲಾ ಎಂತ ಕೇಳಿದರೆ-ಆ ವಿಚಾರದಲ್ಲಿ ಫೈಲು ತರಿಸಿ ನೋಡುತ್ತೇನೆ ಎಂತ ಹೇಳಿ ತೆಪ್ಪಗೆ ಕುಳಿತರು! ಟೂರುಗಳಲ್ಲಿ ಮಂತ್ರಿಗಳು ಕೊಡತಕ್ಕ ಆಶ್ವಾಸನಗಳ ತೂಕ ಇಷ್ಟಿರುತ್ತೆ! ಹೀಗೆಲ್ಲಾ ಜನರಿಗೆ ತಾವು ಕೊಟ್ಟನಂತರ ಅದನ್ನು ಪರಿಪೂರ್ಣಗೊಳಿಸಲು ಶಕ್ತಿ ಇಲ್ಲದಿರುವಾಗ ಇವರು ಹೇಗೆ ಚುನಾವಣೆಕಾಲದಲ್ಲಿ ಮುಖ ಇಟ್ಟುಕೊಂಡು ಜನರ ದುಡ್ಡಿನಿಂದ ಕೊಂಡ ಕಾರುಗಳಲ್ಲಿ ತಿರುಗಿ ಓಟುಕೊಡಿ ಎಂತ ಕೇಳುತ್ತಾರೋ ನಾನು ಕಾಣೆ. ಮರ್ಯಾದೆ ಇಲ್ಲದ ಮೇಲೆ ಯಾವ ಕೆಲಸ ಮಾಡುವುದಕ್ಕೆ ಯಾರೂ ಹಿಂಜರಿಯರು. ಇವರು ಚುನಾವಣೆಗಳ ಕಾಲದಲ್ಲಿ ಸರ್ಕಾರದ ಕಾರನ್ನು ಉಪಯೋಗಿಸುತ್ತಾ, ಅಲ್ಲಿ ಜನರಿಗೆ ಪ್ರಚಾರ ಮಾಡುವುದಾದರು ಏನು? ಮಹಾತ್ಮ ಗಾಂಧಿಯವರ ಹೆಸರನ್ನು, ಪ್ರಧಾನ ಮಂತ್ರಿ ನೆಹರೂ ಅವರ ಹೆಸರನ್ನು ಹೊಗಳುತ್ತಾ, ಹೋಗುವುದು ಅದರ ಜೊತೆಗೆ ಬಡರೈತನ ಮನೇಲಿರುವ ಜೋಡೆತ್ತುಗಳ ಗುರುತುಬೇರೆ. ಆ ಹಳ್ಳಿ ಜನರು ಇವರ ಬೆಡಗಿನ ಮಾತುಗಳಿಗೆ ಬೆರಗಾಗಿ ಈ ಜನರಿಗೆ ಓಟುಹಾಕಿ ಆ ಜೋಡೆತ್ತುಗಳಿಗೆ ಕೈಮುಗಿದು ಹೋಗುತ್ತಿದ್ದಾರೆ. ಆ ಜನರ ಭಾವನೆ ಏನಿರುತ್ತೆಂದರೆ ಬಸವಣ್ಣ ನೆಲವನ್ನು ಗೈಯ್ದು ನಮಗೆ ಆಹಾರ ಒದಗಿಸುತ್ತಿದ್ದಾನೆ, ನಾವು ಪೂಜೆ ಮಾಡತಕ್ಕ ಪ್ರಾಣಿ ಇದು ಎಂಬ ಭಾವನೆಯಿಂದ ಆ ಹಳ್ಳಿಜನರು ಈ ಕಾಂಗ್ರೆಸಿನವರಿಗೆ ಓಟನ್ನು ಹಾಕುತ್ತಿದ್ದಾರೇ ವಿನಾ ಬೇರೆಯಾವ ಕಾರಣಕ್ಕೂ ಅಲ್ಲ ದೇಶದಲ್ಲ ಯಾವ ಜನರು ಇವರಿಗೆ ಹೆಚ್ಚಿಗೆ ಓಟುಗಳನ್ನು ಹಾಕಿರುತ್ತಾರೋ ಅಂಥವರಿಗೇ ಈಗಿರತಕ್ಕ ಸರ್ಕಾರ ವಿರುಧ್ಧವಾಗಿ ವರ್ತಿಸಿ, ಅವರಿಗೇ ಅನ್ಯಾಯಮಾಡುತ್ತಿದ್ದರೂ ಪುನ ಪುನಾ ಇವರು ಅವರಲ್ಲೇ ಹೋಗಿ ಓಟುಕೊಡಿ ಎಂತ ಕೇಳತಕ್ಕದ್ದು ಯಾವ ಧರ್ಮ, "ವೇದ-ರಾಮಾಯಣಗಳನ್ನು ಓದಿದ್ದೀರೇನು? M.A.L.L.B.ಗಳನ್ನು ಪಾಸ್ ಮಾಡಿದ್ದರೇನು?"

Sri C. M. ARUMUGHAM.—I rise to a point of order. This resolution says:

> "This Assembly is of the opinion that Ministers should not undertake tours during the period of two months preceding the the last date of polling during the general Elections any propagandist activity in support of candidates in the said General Elections belonging to their own political Party or parties provided that this shall not deprive the Ministers the right to do anything permitted by law in support of their own individual candidature in the General Elections and in their respective constituencies".

For argument's sake, if a Minister stands for Parliament as our Hon'ble Chief Minister Mr. Jatti is going to stand for Parliament...

Sri B. D. JATTI.— Who told you? Why do you presume?

Sri C. M. ARUMUGHAM.—Even if he stands for Parliament he is going to become a Minister in the Centre.

This resolution says that he should not support candidates of his own political party. But here he is standing for Parliament and should he not support the candidates standing for legislature? I want a clarification Sir.

Mr. DEPUTY SPEAKER.—There is no point of order.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಧಿಕಾರ ನಮ್ಮ ಕೈಲಿದೆ ಎಂತ ಇವರು ನಿತ್ಯ ನಡೆಯತಕ್ಕ ಆಡಳಿತದಲ್ಲಿ ಕೈಹಾಕಿದರೆ ಬೇರೆ ಪಾರ್ಟಿಯವರಿಗೆ ಚುನಾವಣೆಯಲ್ಲಿ ಬರಲು ತೊಂದರೆಯಾಗುತ್ತೆ. ''ಎಷ್ಟು ವೇದಗಳನೋದಿದರೇನು, ಹದ್ದಿನಂತೆ ಎಷ್ಟು ಎತ್ತರ ಹಾರಿದರೇನು? ಆ ಹದ್ದು ದುರ್ನಾತ ಹಿಡಿದಕೂಡಲೇ ಕೆಳಗಿಳಿದು ಬರುವಂತೆ ಎಂಬುದಾಗಿ ರಾಮಕೃಷ್ಣ ಪರಮಹಂಸರು ಹೇಳಿದ್ದಾರಲ್ಲ ಹಾಗೇನೇ ಈ ಮಂತ್ರಿಗಳುಕೂಡ ತಮ್ಮ ಸುತ್ತಮುತ್ತಲೂ ಸುತ್ತಿಕೊಂಡಿರುವ ಕೆಟ್ಟ ಸಹವಾಸಿಗಳ ಗಾಳಿ ಬೀಸಿದ ಕೂಡಲೇ ಇವರು ಕೀಳು ಮಟ್ಟದವರನ್ನು ಚುನಾವಣೆಗೆ ನಿಲ್ಲಿಸಬೇಕಾಗುತ್ತದೆ. ಆ ಕೀಳುಮಟ್ಟದ ಜನರು ಮುಂದೆ ಏನು ಕೆಲಸ ಬೇಕಾಗಿದ್ದರೂ ಶ್ರೀ ವಾರ್ಕ ಶಿವಪ್ಪನವರಂತೆ ಮಾಡಲು ಸಿದ್ಧವಾಗಿರುತ್ತಾರೆ. ಆದುದರಿಂದ ನಾನೀಗ ಈ ಮಂತ್ರಿಗಳಿಗೆ ಹೇಳುತ್ತಿರುವುದೇನೆಂದರೆ—ದೇಶದ ಹಿತ ದೃಷ್ಟಿಯಿಂದ ಸರ್ಕಾರಿ ಕಾರು ಮತ್ತು ಅಧಿಕಾರಿಗಳನ್ನು ತಮ್ಮ ಕೈವಾಡದಲ್ಲಿಟ್ಟುಕೊಂಡು 150 ಜನರು ಇಲ್ಲಿಗೆ ಬಂದು ಆಡಳಿತ ನಡೆಸುವುದಕ್ಕಿಂತ ಈ ಅನ್ಯಾಯ ಮಾರ್ಗಗಳನ್ನೆಲ್ಲಾ ತ್ಯಾಜ್ಯಮಾಡಿ ಕೇವಲ 50 ಜನರು ನ್ಯಾಯವಾದ ಮಾರ್ಗದಲ್ಲಿ ಬಂದು ಆ ಪೊಜಿಷನ್ ಸೈಡಿನಲ್ಲಿ ಕುಳಿತುಕೊಂಡರೆ ಅದಕ್ಕೆ ಹೆಚ್ಚಿನ ಬೆಲೆ ಇರುತ್ತೆ.

ಉಪಾಧ್ಯಕ್ಷರು.—ನೀವು ಜಾಗ್ರತೆ ಮುಗಿಸಿ. 15 ನಿಮಿಷಗಳು ಮಾತ್ರ ಒಬ್ಬೊಬ್ಬರಿಗೆ ಮಾತನಾಡಲು ಅವಕಾಶ ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ;—ನಾನಾಗಲೇ ಹೇಳಿದಂತೆ ಈ ಮಂತ್ರಿಗಳ ಕೈಲಿ ಏನೇನು ಅಧಿಕಾರವಿದೆಯೋ ಅದೆಲ್ಲವನ್ನು ಈ ಚುನಾವಣೆಗಳಕಾಲದಲ್ಲಿ ದುರ್ವಿನಿಯೋಗ ಮಾಡಲು ಅವಕಾಶ ಮಾಡಿಕೊಳ್ಳುತ್ತಾರೆ. ಕೆಲವು ಮಂತ್ರಿಗಳು ಕೆಲವರಿಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಸರಕನ್ನು ಮಾರತಕ್ಕ ಹೋಲ್‌ಸೇಲ್ ಏಜೆನ್ಸಿ ಕೊಡೋದರ ಮೂಲಕ ಓಟನ್ನು ಪಡೆಯುತ್ತಾರೆ. ಇನ್ನು ಕೆಲವರು ಇನ್ನು ಕೆಲವು ಕೈವಾಡಗಳನ್ನು ಮಾಡುತ್ತಾರೆ! ಹೀಗೆ ಇವರು ಅಧಿಕಾರದಲ್ಲಿದ್ದರೆ ಜನರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಅನೇಕ ಮಾರ್ಗಗಳಿರುತ್ತವೆ, ಈ ಮಂತ್ರಿಗಳು ಹೀಗೆಲ್ಲಾ ಅಡ್ಡದಾರಿ ಹಿಡಿದು ಅವರ ಪಾರ್ಟಿ ಜನರಿಗೆ ಸಹಾಯಮಾಡದೆ ಹೋದರೆ ಆ ಜನರು ಇವರನ್ನು ಅಧಿಕಾರವಲ್ಲಿಡಲು ಒಪ್ಪುವುದಿಲ್ಲ. ಆ ಕೂಡಲೇ ಸಹಿ ಸಂಗ್ರಹಣೆಗೆ ಹೊರಟೇ ಬಿಡುತ್ತಾರೆ! ಬೆಂಗಳೂರಿಗೂ-ಡಿಲ್ಲಿಗೂ ಏರೋಪ್ಲೇನ್‌ಯಾತ್ರೆ ಷುರು ಆಗಿಬಿಡುತ್ತೆ. ಹೀಗಾಗಿ ಈ ಹಿಂದೆ ಸಹಿ ಸಂಗ್ರಹಣೆ ಸೀಜನ್ನಿನಲ್ಲಿ ಬೆಂಗಳೂರಿನ ಕೆಲವು ವರ್ತಕರಿಗೆ ಡಿಲ್ಲಿಗೆ ಹೋಗಲು ಪ್ಲೇನಿನಲ್ಲಿ ಸಿಕ್ಕಲಿಲ್ಲವಂತೆ! ಹೀಗೆಂತ ವರ್ತಮಂಡಳಿಯವರು ಕೆಲವುಕಡೆ ಮಾತನಾಡಿಕೊಳ್ಳುತ್ತಿದ್ದುದು ನನ್ನ ಕಿವಿಗೆ ಬಿದ್ದಿತು. 1947ರಲ್ಲಿ ಹುಟ್ಟದೆ ಇದ್ದವರಿಗೂ ಸಹ ರಾಜಕೀಯದಲ್ಲಿ ನೊಂದವರೆಂದು ಹೇಳಿ ಅಂಥವರಿಗೂ ಸಹ ಈ ಮಂತ್ರಿಗಳು ಜಮೀನನ್ನು ಕೊಟ್ಟಿದ್ದಾರೆ! ಇಂಥ ವಿಚಿತ್ರಗಳು ಒಂದಲ್ಲ-ನೂರಾರಿವೆ. ಆದಕಾರಣ ಈಗ ಸಭೆಯಮುಂದಿರತಕ್ಕ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಸಾರ್ವತ್ರಿಕ ಚುನಾವಣೆಗಳು ನಡೆಯುವುದಕ್ಕೆ ಎರಡು ತಿಂಗಳು ಮುಂಚಿತವಾಗಿಯೇ ಇವರು ತಮ್ಮ ಮಂತ್ರಿ ಪದವಿಗಳಿಗೆ ರಾಜೀನಾಮೆ ಕೊಟ್ಟು-ಸರ್ಕಾರಿ ಮೆಷನರಿಗಳೊಂದನ್ನು ಅಪೇಕ್ಷೆಮಾಡದೆ ಮುಂದಿನ ಚುನಾವಣೆಗಳಲ್ಲಿ ಬಾಗವಹಿಸುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2–30 P. M.

†Sri B. SHAMSUNDAR (Bhalki).—Sir, the democracy that we have pledged ouerselves to work is something wonderful. We have picked up something from here, something from there and something from somewhere else and cooked up something to show to the world that we are running a democracy. In this age of democracy in other countries they have devised ways and means to bifurcate the judiciary from the executive but here up till now we have failed to bring about that separation of the

(Sri B. SHAMSUNDAR)

judiciary from the executive. Only yesterday we passed a Bill, the Compulsory Primary Education Bill. I do not know who are the experts who advised this Government to bring forward that Bill in which we say we give judicial powers to the panchayats. How far the panchayats are able to exercise these powers actually is anybody's guess.

Sri S. D. KOTHAWALE.—On a point of order. This House has accepted the Compulsory Primary Education Bill. My friend wants to challenge the decision taken by this House. The rule is that no decision of the House can be challenged except by a substantive motion.

Sri B. SHAMSUNDAR.–It is not a point of order. I am not challenging it.

Sri G. VENKATAI GOWDA.—Are we not entitled to say what we personally feel about it?

Sri B. SHAMSUNRDAR.—In that Bill powers are given to the village panchayats to exercise certain judicial functions. I think this is fraught with disaster to the entire panchayat system in India. This Bill will have a very bad effect upon the social system in India. My friend the Advocate General of the Congress Party has raised a point of order that I am challenging that Bill. I wish he had the patience to hear me fully. The separation of the judiciary from the executive is not yet ripe in our country. We have copied the democracy expounded in Great Britain and other foreign countries, but we must know what is the position in England. We must know that Britain has an unwritten constitution and its own conventions. There if a member brings a question against a Minister in Parliament, the Minister immediately resigns. Only the other day I read a very beautiful article in the Readers Digest of April about Question Hour in the House of Commons in which it is stated that a member brought a question against a certain Minister and the Minister had to resign. Here we are bringing not only questions, but we have also brought resolutions. We have pointed out so many discrepancies, but nobody cares for us. I also wrote a letter to the Chief Minister stating that a certain Minister went to my constituency and there he told the people "Join Congress, join Congress." He said this at Masal, at Gulbarga and also in Sri Danappa's constituency. This is how Ministers are using their influence for getting votes for themselves and for their party. These Ministers implant their own agents who are the civil servants, to serve their purpose in their constituencies. They get some of the civil servants transerred to their own constituencics in order to work for their election. These things are going on. In this connection I am reminded of a Urdu couplet. The meaning of it is this. Why is there no licence for this white cap? How is that it secures 303? These people exercise undue influence in one way or the other. Even according to the Representation of the People Act this is undue influence which is prohibited. This is a crime according to the Indian Penal Code also. Wherever a Minister goes he goes with his paraphernalia and his agents who work for him and his party. So it is but proper that they should

not only not tour but they should resign six months prior to elections. I do not know why my Hon'ble friend Sri Narasimhan has only said that they should not tour and has not said that they should resign six months before election. Even according to Representation of the People Act, no money from the State Exchequer should be spent for the election propaganda of any candidate and so if the Ministers tour for election purposes it is against that Act. So if this Government has any sense of moral values, it should resign six months prior to election. I have got several instances to show what an amount of influence these Ministers are bringing on the people to serve their party ends. I am saying this not merely as a member of the Opposition but also as a citizen of India. If we want to establish real democracy in our country, these people should resign six months prior to election and should not exercise any official influence. This should be the convention, whichever party may be in power, but unfortunately the ruling party does not believe in this. What did they do in Kerala? In Kerala they did not allow the Communist Government to continue till the elections, but they brought in President's rule because they thought that the Government would use their influence and that would affect the elections, but I would ask them whether they are not doing the same thing in other States? So why should they not resign? This incident happened not merely in Kerala, but also in Orissa. In Orissa also the same thing happened. Take the example of that great part of India which is called U.P. There also the situation is the same, but they do not want to resign. I will quote another instance. As we all know, till yesterday the time table of the Assembly session given to us was that the House would sit for 4 days more, to transact non-official business, but what happens today. This morning the Chief Minister comes and says that we will sit only for 2 days and not 4 days. If I may say so, this is worse than even dictatorship. This is not democracy. What is this Khaddar curtain behind which they say so many things? This is worse than metal curtain?

I do not want to waste much of my breath over this problem. If at all, the Government are interested, they want to have the good faith of the people and if they want to show that they are as anxious as others to make all efforts towards establishing demacracy in this country, let them come forward and say that they would resign two months prior to the election. Unless they do this, I do not think we will be able to establish democracy in the true sense of the term. On the other hand, we are going towards the totalitarian policy; on each and every thing we adopt arbitrary methods, totalitarian methods. There are several cases in which they issue orders and subsequently they cancel them. If I have time, I can quote the instances. When an order is passed, after three days another order comes, cancelling the previous orders. Such things are happening in this country. I can give four or five examples. Three years orders were passed. Up till now they were not implemented because the political party, your own party in the area are working against the interests of the poor people. I would like to refer to what

(SRI B. SHAMSUNDAR)

the Social Minister saiq in Gulbarga. In the course of his speech he said : "You join congress and we give you land." Under the rule of the congress people, people should feel that they are the people who can change the Government or who can keep the Government. Unless that feeling comes, there is no democracy. I must say that the congress people are not at all following the principles and philosophy enunciated by Mahatmaji who is considered to be an avatar of God. The entire situation in the country has changed. As a gesture of goodwill, I hope you will stop touring for party propaganda but you will resign two months prior to general elections. I thank you very much because one sentence is enough for the people who know it and who can do it.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ(ಗುಬ್ಬಿ).—ಸ್ವಾಮಿ ನನ್ನ ಸ್ನೇಹಿತರಾದ ಶ್ರೀಮಾನ್ ನರಸಿಂಹನ್ ಅವರು ತಂದಿರುವ ಈ ನಿರ್ಣಯದಲ್ಲಿ ಸಂಪೂರ್ಣ ಸತ್ಯವಿದೆ. ಸತ್ಯಕ್ಕೋಸ್ಕರ ಕಟ್ಟುಬಿದ್ದು ಆಡಳಿತವನ್ನು ಈ ಜನ ನಡೆಸುತ್ತಿದ್ದಾರೆ. ಈ ನಿರ್ಣಯವನ್ನು ಒಪ್ಪಿಕೊಂಡು ಅದರಂತೆ ನಡೆಯಬೇಕೆಂದು ನಾನು ಈ ಸಭೆಯಲ್ಲಿ ಸೂಚಿಸಬೇಕೆಂದು ನಿಂತಿದ್ದೇನೆ.

ಸ್ವಾಮಿ, ನನ್ನ ಸ್ನೇಹಿತರಾದ ಶ್ರೀಮಾನ್ ಮುನಿರಾಜುರವರು ಸತ್ಯಕ್ಕೆ ಕಟ್ಟುಬಿದ್ದಿದ್ದೇವೆಂದು ಹೇಳುತ್ತಾರೆ. "ಮಂದಮತಿ ನಿಂದಿಸಲು ಮನಕದ ತಂದುಕೊಳ್ಳದ ನರನು ಜಾಣನು" ಎಂದು ಹೇಳಿರುವಂತೆ.........

ಉಪಾಧ್ಯಕ್ಷರು.—ಅದಿಲ್ಲ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಲೋಕಸಭೆಯಲ್ಲಿ ಮಾತನಾಡುವಾಗ ಭಾರತ, ಭಾಗವತ, ರಾಮಾಯಣ ಇತ್ಯಾದಿ ಗಳಲ್ಲಿರುವುದನ್ನು ಹೇಳುತ್ತಾರೆ. ನಾವು ಮೊದಲನೆ ತರಗತಿಯಲ್ಲಿ ಓದಿದ್ದನ್ನು ಹೇಳಬಾರದೆಂದರೆ ಏನು ಸ್ವಾಮಿ ?

ಉಪಾಧ್ಯಕ್ಷರು.—ರಾಗವಾಗಿ ಹೇಳಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮಗೆ ಸ್ವಲ್ಪ ಕಿವಿಗೆ ಇಂಪಾಗಿರಲಿ ಎಂದು ಹಾಗೆ ಹೇಳಿದೆ.

ಉಪಾಧ್ಯಕ್ಷರು.—ಇಂಪಾಗಿರುವಂತೆ ಬೇರೆ ಕಡೆ ಹೋಗಿ ಹೇಳಬಹುದು. ಇಲ್ಲಿ ಆ ರೀತಿ ಹೇಳುಹುದು ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂದಮತಿ ಎಂದರೆ ಸ್ವಲ್ಪ ತಿಳುವಳಿಕೆಯಿಲ್ಲದವರು, ಬುದ್ಧಿಕಡಿಮೆಯಿರುವವರು ಎಂದು ತಿಳಿದುಕೊಳ್ಳುತ್ತೇನೆ. ಇವರು ಸತ್ಯವಂತರೇ ಎಂದು ವಿಚಾರ ಮಾಡುತ್ತಹೋದರೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅವರು ಸತ್ಯದಹಾದಿಯನ್ನು ಬಿಟ್ಟು ಮಧ್ಯದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಗಾಂಧಿಜಿಯವರ ಹೆಸರಿನಲ್ಲಿ, ಸತ್ಯದ ಹೆಸರಿನಲ್ಲಿ ಕೆಲಸ ಮಾಡುತ್ತೇವೆನ್ನುವ ಜನ ಇನ್ನಾದರೂ ತಿದ್ದಿಕೊಳ್ಳಿ ಎಂದು ನನ್ನ ಸ್ನೇಹಿತರಾದ ಮುನಿರಾಜುರವರಿಗೆ ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ನನ್ನ ಸ್ನೇಹಿತರಾದ ಶ್ರೀಮಾನ್ ಶಾಮಸುಂದರ್ ಅವರು ಚುನಾವಣೆಗಳಿಗೆ ಎರಡು ತಿಂಗಳ ಮುಂಚೆ ಪ್ರವಾಸ ಮಾಡದು ಎಂದು ಹೇಳುವುದಕ್ಕಿಂತ ಶ್ರೀಮಾನ್ ರಾಜಗೋಪಾಲಾಚಾರಿಯವರು ಚುನಾವಣೆಗಳಿಗೆ ಆರು ತಿಂಗಳ ಮುಂಚೆ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ಹೇಳಿರುವಂತೆ ರಾಜೀನಾಮೆ ಕೊಟ್ಟು ಚುನಾವಣೆಗಳಿಗೆ ನಿಲ್ಲಬೇಕು ಎಂದು ಹೇಳಿದರು. ಸ್ವತಂತ್ರವಾಗಿ ಚುನಾವಣೆಗೆ ನಿಂತು ತಮ್ಮ ಕ್ಷೇತ್ರಕ್ಕೆ ಹೋದರೆ [illegible] ನಾಲ್ಕುವರೆ ವರ್ಷಗಳ ಕಾಲದಲ್ಲಿ ಏನೇನು ಸಾಧನೆಯನ್ನು ಮಾಡಿದ್ದೀರಿ ಎಷ್ಟೊಂದು ದುಷ್ಕೃತ್ಯಗಳನ್ನು ಮಾಡಿದ್ದೀರಿ ಎಂಬುದನ್ನು ಜನರು ಹೇಳಿ ಎಷ್ಟು ಮಾತ್ರ ತಮ್ಮ ಓಟನ್ನು ಕೊಡುತ್ತಾರೆಂಬುದು

ಗೊತ್ತಾಗುತ್ತದೆ. ಆದರೆ ಇವರು ಆರೀತಿ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ ರೋಗಿಗೆ ಅಮೃತವಾದದ್ದು ಹೇಗೆ ಹಿಡಿಸುವುದಿಲ್ಲವೋ ಹಾಗೆಯೇ ಈ ಕಾಂಗ್ರೆಸ್ ರೋಗಿಗಳಿಗೆ ನಾವು ಹೇಳುವ ಒಂದು ಒಳ್ಳೆಯ ಮಾತು ಕೂಡ ಹಿಡಿಯುವುದಿಲ್ಲ. ನಾನು ಒಂದೇ ಒಂದು ವಿಷಯವನ್ನು ನಾನು ಅದರಲ್ಲಿ ತಮ್ಮ ಮೂಲಕ ಅರಿಕೆಮಾಡಿಕೊಳ್ಳುತ್ತೇನೆ. ಮೊನ್ನೆತಾನೇ ನಡೆದ ತಾಲ್ಲೂಕು ಬೋರ್ಡ್ ಚುನಾವಣೆಗಳಲ್ಲಿ ಇವರು ಏನೇನು ಮಾಡಿದರೆನ್ನುವುದನ್ನು ಸ್ವಲ್ಪ ಅವರೋಕಿಸಿದ್ದಾರೆ ಮುಂದಿನ ಮಹಾಚುನಾವಣೆಗಳಲ್ಲಿ ಎಷ್ಟರಮಟ್ಟಿನ ದುರ್ನೀತಿ, ದುರ್ಮಾರ್ಗವನ್ನು ಅನುಸರಿಸುತ್ತಾರೆನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಚುನಾವಣೆಗಳಿಗೆ ಮುಂಚೆ ಎರಡು ತಿಂಗಳು ಮಂತ್ರಿಗಳು ಪ್ರವಾಸ ಮಾಡಬಾರದೆನ್ನುವ ಈ ನಿರ್ಣಯವನ್ನು ಒಪ್ಪಿಕೊಳ್ಳದೆ ಹೋದರೆ ಚುನಾವಣೆ ಕಾಲದಲ್ಲಿ ನಡೆಯಬಾರದ ಅಕೃತ್ಯಗಳೆಲ್ಲ ನಡೆಯುತ್ತವೆ.

ಇತ್ತೀಚೆಗೆ ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀಮಾನ್ ನೀಲಂ ಸಂಜೀವರೆಡ್ಡಿಯವರು ನಿಮ್ಮ ಹೆಂಡತಿ, ಮಕ್ಕಳು, ಎಲ್ಲರ ಹೆಸರಿನಲ್ಲಿಯೂ ಇರುವ ಆಸ್ತಿ-ಪಾಸ್ತಿಗಳ ಲೆಕ್ಕವನ್ನು ಕೊಡಿ ಎಂದರೆ, ತನ್ನಮಗ 27ಲಕ್ಷರೂಪಾಯಿಗಳನ್ನು ಸಂಪಾದನೆ ಮಾಡಿರುವಾಗ, ನನಗೂ ನನ್ನಮಗನಿಗೂ ಸಂಬಂಧವಿಲ್ಲವೆಂದು ಹೇಳತಕ್ಕಜನ ಎಷ್ಟು ಸತ್ಯಸಂಧತೆಯಿರುವವರು ಮತ್ತು ಯಾವರೀತಿ ನ್ಯಾಯಮಾರ್ಗದಲ್ಲಿ ಹೋಗತಕ್ಕವರು ಎಂದು ಸುದೀರ್ಘವಾಗಿ ಯೋಚನೆಮಾಡುವುದಾದರೆ, ನ್ಯಾಯ, ಸತ್ಯ, ಧರ್ಮಎಂದು ಏನು ಹೇಳುತ್ತಾರೆಯೋ ಅದೆಲ್ಲ ಇವರಲ್ಲಿ ಲೋಪವಾಗಿದೆ ಎಂದು ಹೇಳಬಹುದು.

ನಮ್ಮ ಅಧಿಕಾರ ಬಿಟ್ಟರೆ ಬೇರೆ ಇಲ್ಲವೆಂದು ಹೇಳತಕ್ಕ ಸ್ನೇಹಿತರಿಗೆ ಒಂದುಮಾತು ಹೇಳುತ್ತೇನೆ. ತಾವೇ ಅಧಿಕಾರಕ್ಕೆ ಬರುವುದಾದರೂ, ಕೊನೇಪಕ್ಷ ಚುನಾವಣೆಗಳಿಗೆ ಎರಡು ತಿಂಗಳುಮುಂಚೆ ದೇಶದಲ್ಲಿ ಪ್ರವಾಸ ಮಾಡುವುದನ್ನು ಬಿಟ್ಟು, ತಾವು ಸ್ವತಂತ್ರವಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಂತುಕೊಳ್ಳಿ. ಇದೇ ನನ್ನಸ್ನೇಹಿತರಾದ ನರಸಿಂಹನ್ ಅವರು ತಂದಿರುವ ನಿರ್ಣಯದ ಮೂಲೋದ್ದೇಶ. ತಾಲ್ಲೂಕು ಬೋರ್ಡ್ ಚುನಾವಣೆಗಳಲ್ಲಿ ಸರ್ಕಾರಿ ಕಾರುಗಳನ್ನು ಟಿ. ಬಿ. ಗಳಮುಂದೆ ಬಿಟ್ಟು, ಬಾಡಿಗೆಕಾರುಗಳಲ್ಲಿ ಬಂದು ಪ್ರಚಾರ ಮಾಡಿದರು. ಈ ಸಭೆಯಲ್ಲಿ ನಡೆದಂಥ ಪ್ರಶ್ನೋತ್ತರಗಳ ಕಾಲದಲ್ಲಿ ಮಂತ್ರಿಗಳು ಎರಡುಲಕ್ಷ ಮೈಲ ಪ್ರವಾಸಮಾಡಿ, ಲಕ್ಷಾಂತರರೂಪಾಯಿಗಳನ್ನು T. A. ಮತ್ತು D. A. ರೂಪದಲ್ಲಿ ತೆಗೆದುಕೊಂಡಿರುವುದಾಗಿ ಹೇಳಿದರು. ಚುನಾವಣೆಗಳ ಕಾಲದಲ್ಲಿ T. A. ಮತ್ತು D. A. ರೂಪದಲ್ಲಿ ಸಹಸ್ರಾರು ರೂಪಾಯಿಗಳನ್ನು ಮಂತ್ರಿಗಳು ತೆಗೆದುಕೊಂಡಿಲ್ಲವೇ ಎಂದು ಕೇಳಿದಾಗ ಸರ್ಕಾರದವರು ಉತ್ತರ ಕೊಡಲು ಕಷ್ಟವಾಗಿ ಇಕ್ಕಟ್ಟಿನ ಸ್ಥಿತಿಗೆ ಸಿಕ್ಕಿಹಾಕಿಕೊಂಡಾಗ. ತಾವು ಮುಂದಿನ ಪ್ರಶ್ನೆಯನ್ನು ಕರೆದು ಬೇರೆ ಪ್ರಶ್ನೆಗೆ ಅವಕಾಶಕೊಟ್ಟಿರಿ.

ಈ ದೇಶದಲ್ಲಿ ಸರಿಯಾದ ಪಕ್ಷ ಬೇರೆ ಯಾವುದೂ ಇಲ್ಲವಾದ್ದರಿಂದ ನಾವೇ ಆಡಳಿತ ನಡೆಸಬೇಕೆಂದು ಹೇಳುವ ನನ್ನ ಸ್ನೇಹಿತರಲ್ಲಿ ಒಂದು ವಿಷಯ ಅರಿಕೆ ಮಾಡಿಕೊಳ್ಳುತ್ತೇನೆ. ನೀವೇ ಆಡಳಿತನಡೆಸಬೇಕೆಂಬ ಮನಸ್ಸಿದ್ದರೆ, ಸರಿಯಾದ ರೀತಿ ನೀತಿಗಳನ್ನು ಅನುಸರಿಸಿ ಎಂದು ಹೇಳುತ್ತೇನೆ. ಚುನಾವಣೆಗಳ ಕಾಲದಲ್ಲಿ ಮಹಾತ್ಮಗಾಂಧಿ, ಭಾರತದ ಪ್ರಧಾನಮಂತ್ರಿಗಳು, ಇವರ ಹೆಸರುಗಳನ್ನು ಉಪಯೋಗಿಸಿಕೊಂಡು ಮಾಡಬಾರದ ಪಾಪದ ಕೆಲಸಗಳನ್ನು ಮಾಡಬೇಡಿ. ಯಾವಸಂಸ್ಥೆ ಈ ದೇಶದ ಕೀರ್ತಿಯ ಕಳಶವನ್ನು ಗೌರೀಶಂಕರಕ್ಕೆ ಏರಿಸಿತ್ತೋ ಅಂಥ ಸಂಸ್ಥೆಯ ಹೆಸರಿನಲ್ಲಿ ದುರಾಚಾರ ಮಾಡುವುದನ್ನು ಬಿಟ್ಟು, ಸ್ವತಂತ್ರವಾಗಿ ಚುನಾವಣೆಗಳಲ್ಲಿ ನಿಂತುಕೊಳ್ಳಿ. ಮತ್ತು ಚುನಾವಣೆಗಳು ಎರಡು ತಿಂಗಳಿರುವಾಗ ಯಾರು ದೇಶದಲ್ಲಿ ಪ್ರವಾಸ ಮಾಡಬಾರದು ಎಂದು ಹೇಳುವ ಈ ನಿರ್ಣಯವೇನಿದೆ ಅದು ನಿಜವಾಗಿಯೂ ಮಹತ್ವಪೂರಿತವಾದ ನಿರ್ಣಯವೆಂದು ಹೇಳುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತಾವು ಎಲ್ಲಿ ಕೈಯನ್ನು ಹಾಕಿಲ್ಲ, ಯಾವ ಚುನಾವಣೆಗಳಲ್ಲಿಯೂ ಕೈಹಾಕಿಲ್ಲ ಎಂದು ಹೇಳುವವರು ಪಂಚಾಯಿತಿಗಳ ಎಲೆಕ್ಷನ್ನಿನಲ್ಲಿ ಕೈ ಹಾಕಿಲ್ಲವೇ? ತಾಲ್ಲೂಕು ಬೋರ್ಡುಗಳ ಚುನಾವಣೆಯಲ್ಲಿ ಕೈ ಹಾಕಲಿಲ್ಲವೇ? ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಎಲೆಕ್ಷನ್ನಿನಲ್ಲಿ ಕೈ ಹಾಕಲಿಲ್ಲವೇ? ತಾಲ್ಲೂಕ್ ಬೋರ್ಡುಗಳಲ್ಲಿ ಚೇರ್ಮನರ ಮತ್ತು ವೈಸ್ ಚೆರ್ಮನ್ನರ ಚುನಾವಣೆಗಳಲ್ಲಿ ಕೈ ಹಾಕಲಿಲ್ಲವೇ? ಹಾಗೇ ಇಚೆಗೆ ನಡೆದ ಬೈ ಎಲೆಷನ್ನಿನಲ್ಲಿ ಕೈ ಹಾಕಲಿಲ್ಲವೇ! ಎಲ್ಲದರಲ್ಲಿಯೂ ಕೈ ಹಾಕಿದ್ದಾರೆ. ನಮ್ಮ ಸ್ನೇಹಿತರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಚಿಂತಾಮಣಿಗೆ ಚುನಾವಣಾ ಪ್ರಚಾರಕ್ಕೆ ಹೋಗಿ ಲಾರಿಯಲ್ಲಿ ಬರುತ್ತಿದ್ದಾಗ ಅವರ ಜೊತೆಯಲ್ಲಿ ನಮ್ಮ ಮಾನ್ಯ ಸದಸ್ಯರಾದ ಮೊಹಸಿನ್ ರವರೂ ಇದ್ದರು. ಅಲ್ಲಿ ಪೊಲೀಸಿನವರು ಲಂಚ ತೆಗೆದುಕೊಳ್ಳುತ್ತಿದ್ದರೂ ಅದನ್ನು ನಾವು ನೋಡಲಿಲ್ಲ ನಿದ್ರೆ ಮಾಡುತ್ತಿದ್ದೆವು ಎಂದು ಹೇಳಿದರು ಚಿಂತಾಮಣಿಗೆ ಚುನಾವಣೆಯ ಪ್ರಚಾರಕ್ಕೆ ಹೋದಾಗ ಮೈಸೂರು ಸಂಸ್ಥಾನದ ಮಂತ್ರಿಗಳಾಗಿ ಹೋಗದೇ ಬರೀ ಸಾಮಾನ್ಯ ಮನುಷ್ಯರಂತೆ ಹೋಗಿದ್ದರೆ ನಾನು ಒಪ್ಪುತ್ತಿದ್ದೆ. ಆ ರೀತಿಯಾಗಿ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗಿದ್ದರೇ? ಇವೊತ್ತಿನ ದಿವಸ ನಮ್ಮ ದೇಶದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಚುನಾವಣಾ ಕ್ಷೇತ್ರಗಳಿಗೆ ಹೋದರೆ ಅವೊತ್ತಿನ ದಿವಸ ಮೈಸೂರಿನ ಮುಖ್ಯ ಮಂತ್ರಿಗಳಾಗಿದ್ದವರು ಮೈಸೂರ್ ಕಾಂಗ್ರೆಸ್ಸಿನ ಮಹಾ ಉನ್ನತ ವ್ಯಕ್ತಿಗಳಾಗಿದ್ದ ನಾಯಕರಾಗಿದ್ದರು ಉನ್ನತವಾಗಿ ರಾಜ್ಯಭಾರ ಮಾಡಿದರು ಎಂದು ಕಾಂಗ್ರೆಸ್ಸಿನವರಿಗೇ ವೋಟನ್ನು ಕೊಡಿ ಎಂದು ಕೇಳಿದರೆ ಮತ್ತು ಆ ರೀತಿಯಾಗಿ ಪ್ರಚಾರ ಮಾಡಿದರೆ ನಾನು ಒಪ್ಪುತ್ತಿದ್ದೆ. ನಾಲ್ಕು ದಿವಸಗಳ ಮುಂಚೆ ಈ ಸಭೆಯ ಮಾನ್ಯ ಮಂತ್ರಿಗಳಾದವರೊಬ್ಬರು ಮಗನಿಗೆ ಭಾಗ ಮಾಡಿಕೊಟ್ಟು ಬಿಟ್ಟು ತಮಗೂ ಅವರ ಮಗನ ಭಾಗಕ್ಕೂ ಯಾವ ಸಂಬಂಧವೂ ಇಲ್ಲ, ಎಂದು ಹೇಳುತ್ತಾ ಅವರ ಕುಂಟುಂಬದಲ್ಲಿ ಭಾಗ ಮಾಡಿಕೊಂಡಿದ್ದಾರೆ.

Sri A. R. PANCHAGAVI.—I rise to a point of order, Sir, is it fair for any member to allege that the Ruling was given by the Govenment through the Chair? It is an allegation against the Chair.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವಾಗಲೇ ಈ ಬಗ್ಗೆ ಒಂದು ರೂಲಿಂಗನ್ನು ಕೊಡಿಸಿದ್ದೀರಿ ಇದರಲ್ಲಿ ಯಾವ ಪಾಯಿಂಟು ಆಫ್ ಆರ್ಡರೂ ಬರುವುದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಅವರು ಏನು ಹೇಳುತ್ತಿದ್ದಾರೋ ಆ ಬಗ್ಗೆ ರಿಕಾರ್ಡುಗಳನ್ನು ತರಿಸಿ ತಮ್ಮ ಮೂಲಕ ಒಂದು ರೂಲಿಂಗನ್ನು ಕೊಡಿಸಲಾಯಿತು. ಇಲ್ಲಿ ಅದು ತಮಗೆ Reflection ಆಗುವ ಹಾಗೆ ಅವರು ಹೇಳುತ್ತಿದಾರೆಯೋ ಏನೋ ಎನ್ನುವುದನ್ನು ತಮ್ಮ ತೀರ್ಮಾನಕ್ಕೆ ಬಿಡುತ್ತೇನೆ.

ಉಪಾಧ್ಯಕ್ಷರು.—ಹಾಗೆ ಹೇಳಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಇಲ್ಲಿ ಮಾತನಾಡುತ್ತಿರುವುದು ಕನ್ನಡದಲ್ಲಿ ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ ಎಂದು ನಾನು ಹೇಳುತ್ತೇನೆ. ತಾವು ಇಂಗ್ಲೀಷು ಭಾಷೆಯನ್ನು ಆಡಿಕೊಂಡು ಆ ಇಂಗ್ಲೀಷಿನವರ ದಾರಿಯಲ್ಲೇ ಹೋಗುತ್ತಿದ್ದೀರಿ. ನಮ್ಮ ಸ್ನೇಹಿತರಾದ ಶ್ರೀಮಾನ್ ಸೂರ್ಯನಾರಾಯಣರಾಯರು ಅಷ್ಟು ಕನ್ನಡವನ್ನು ಸರಿಯಾಗಿ ಅರಿತುಕೊಳ್ಳಿ ಎಂದು ಹೇಳುತ್ತಿದ್ದೇನೆ ಇನ್ನು ಸ್ವಲ್ಪ ಅಚ್ಚಗನ್ನಡವನ್ನು ತಿಳಿಗನ್ನಡವನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೇ, ಅಷ್ಟೇ. ತಾವು ಸತ್ಯವಂತರಾಗಿದ್ದರೆ ಚುನಾವಣೆಯಲ್ಲಿ ಓಟನ್ನು ಕೇಳುವುದಕ್ಕಾಗಿ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ವೋಟನ್ನು ಹೋಗಿ ತೆಗೆದುಕೊಂಡಿದ್ದೀರಾ? ದೊಡ್ಡದಾಗಿ ತಾವು ಭಾಷಣವನ್ನು ಮಾಡುತ್ತೀರಿ, ಮಹಾತ್ಮಾ ಗಾಂಧಿಯವರಂತಹ ದೊಡ್ಡ ಹೆಸರನ್ನು

ತೆಗೆದುಕೊಳ್ಳುತ್ತೀರಿ. ಇದರಲ್ಲಿ ಸರಕಾರದ ನೀತಿ ಏನು ? ಸರಕಾರದ ಧೋರಣೆ ಏನು ? ಸರಕಾರ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ಚುನಾವಣೆ ಕಾಲ ಈಗ ಹತ್ತಿರ ಬರುತ್ತದೆ ಎಂದು ಸರಕಾರ ಕಾರುಗಳನ್ನು ತೆಗೆದುಕೊಂಡು ಒಂದು ಲಾಂಡರಿಯನ್ನು ಓಪನ್ ಮಾಡುವುದಕ್ಕೆ ಅಥವಾ ಒಂದು ಮೋಟಾರು ಕಾರನ್ನು ಈಚೆಗೆ ತೆಗೆದುಕೊಂಡು ಅದಕ್ಕೆ ಒಂದು ಸ್ವಿಚ್ಚು ಹಾಕುವುದಕ್ಕೆ ಹೋಗುವುದು, ಇಂತಹ ಸಣ್ಣ ಕೆಲಸ ಕಾರ್ಯಗಳನ್ನು ಒಪ್ಪಿಕೊಂಡು ಹೋಗಿ ಅಲ್ಲಿ ಪ್ರಚಾರ ಮಾಡುವುದಕ್ಕೆ ಹೋಗುವುದು ಸರಿಯೇ? ಅದರಿಂದ ಈ ರೆಸ್‌ಲ್ಯೂಷನ್ನಿನಲ್ಲಿರುವಂತೆ ಮುಂದಿನ ಚುನಾವಣೆಗಳಲ್ಲಿ ಕೊನೆಯ ಪಕ್ಷ ಇನ್ನೂ ಎರಡು ತಿಂಗಳುಗಳು ಇರುವಾಗ ಯಾವುದೇ ತರಹದ ಪ್ರಚಾರ ಕಾರ್ಯಕ್ಕೆ ಹೋಗುವುದನ್ನು ಕೈ ಬಿಡಬೇಕೆಂದು ಇಲ್ಲಿ ಹೇಳಿರುವುದು ಸರಿಯಾಗಿದೆ, ಇದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

ಇನ್ನೊಂದು ಗಹನವಾದ ವಿಷಯವನ್ನು ತಮ್ಮ ಮುಂದೆ ಹೇಳುತ್ತೇನೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಲಿಂಗಾರೆಡ್ಡಿಯವರು ಪ್ರಯಾಣ ಮಾಡುವುದರಲ್ಲಿ ಅಗ್ರ ಸ್ಥಾನವನ್ನು ಪಡೆದಂತಹವರು ಇಂತಹ ಅಗ್ರ ಸ್ಥಾನವನ್ನು ಪಡೆದವರು ಒಂದು ಸಾರಿ ಸಹಕಾರ ಶಾಖೆಯ ಸಚಿವರ ಅಮಂತ್ರಣದಿಂದಾಗಿ ಸಿರಾ ತಾಲ್ಲೂಕಿಗೆ ಅಲ್ಲಿ ಒಂದು ಹೆಲ್ತ್ ಯೂನಿಟ್ಟನ್ನು ತೆರೆಯಲು ಬಂದಾಗ ಏನು ಮಾಡಿದರು ಎನ್ನುವುದನ್ನು ಹೇಳುತ್ತೇನೆ. ಅಲ್ಲಿ ಹೆಲ್ತ್ ಯೂನಿಟ್ಟನ್ನು ಕೊಡಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ತಾರೇಗೌಡರು, ಸಹ ಇದರ ಬಗ್ಗೆ ಒಂದು ರೆಸಲ್ಯೂಷನ್ನನ್ನು ಕಳುಹಿಸಿ ಹೆಲ್ತ್ ಯೂನಿಟ್ಟನ್ನು ಅವರ ಕ್ಷೇತ್ರಕ್ಕೆ ಕೊಡಬೇಕೆಂದು ಹೇಳುತ್ತಿದ್ದರು ಇದನ್ನು ತೀರ್ಮಾನ ಮಾಡುವುದಕ್ಕಾಗಿ ಸಿರಾದಲ್ಲಿ ಒಂದು ಟಿ. ಬಿ. ಯಲ್ಲಿದ್ದು ನಿಶಿ ರಾತ್ರಿಯಲ್ಲಿ ನಮ್ಮ ಸಚಿವರು ಇದನ್ನೆಲ್ಲಾ ಚರ್ಚೆಮಾಡಿ ಮೂರನೇ ದಿನ ವಾಪಸ್ಸು ಬಂದದ್ದಕ್ಕೆ ಇಲ್ಲಿ ಸರಕಾರದ ಕಡೆಯಿಂದ ಟಿ. ಎ. ಯನ್ನು ತೆಗೆದುಕೊಳ್ಳುವುದು ನ್ಯಾಯವೇ ? ಅಲ್ಲದೆ ಅಲ್ಲಿ ತಾಲ್ಲೂಕು ಬೋರ್ಡುಗಳ ಚುನಾವಣೆಯೂ ಇನ್ನೂ ಸ್ವಲ್ಪ ಕಾಲವಿರುವಾಗ ಈ ರೀತಿ ಕೆಲಸ ಮಾಡುವುದು ಏತಕ್ಕೆ ಎಂದು, ನಾನು ಈ ನಿರ್ಣಯದಲ್ಲಿ ಹೇಳಿರುವಂತೆ ಚುನಾವಣೆಗಳಿಗೆ ಎರಡು ತಿಂಗಳಿಗೆ ಮುಂಚೆ ಎಲ್ಲಿಯೂ ಪ್ರವಾಸ ಮಾಡಬಾರದು ಎಂದು ನಾನು ಹೇಳುತ್ತಿದ್ದೇನೆ. ಯಾವುದಾದರೂ ಸ್ಥಳಗಳಲ್ಲಿ ಯಾವುದಾದರೂ ಜಟಿಲವಾದಗ ಪ್ರಸಂಗಗಳಿದ್ದರೆ ತಕ್ಷಣ ಅದು ಬಾರದಂತೆ, ದೇಶದ ಜನಗಳಿಗೆ ನ್ಯಾಯವಾಗುವ ರೀತಿಯಲ್ಲಿ ಜನಗಳಿಗೆ ಸಮಾಧಾನ ತರುವ ರೀತಿಯಲ್ಲಿ ಮಾಡಲು ತಿಳಿದುಕೊಳ್ಳುವುದಿಲ್ಲ, ಆದುದರಿಂದ ನಾನು ಹೇಳುವುದು ಈ ಮಂತ್ರಿ ಮಂಡಲದಲ್ಲಿರುವ 14 ಜನ ಮಂತ್ರಿಗಳು, ಮತ್ತು ಆರು ಜನ ತುಂಡು ಮಂತ್ರಿಗಳು ಪ್ರವಾಸ ಮಾಡುವುದನ್ನು 60 ದಿವಸಗಳ ಮುಂಚಿತವಾಗಿ ರದ್ದು ಮಾಡಬೇಕು ಎಂದು ಹೇಳುತ್ತ ಇದ್ದೇನೆ ಮತ್ತು ಈ 60 ದಿವಸಗಳು ಮನೆಗಳಲ್ಲಿಯೇ ಇದ್ದುಕೊಂಡೇ ತಮ್ಮ ಫೈಲುಗಳನ್ನು ನೋಡಿ ಯಾರಿಗೆ ಕೆಡಕನ್ನು ಮಾಡಿದೆವು, ದೇಶಕ್ಕೆ ಯಾರಿಗೆ ನ್ಯಾಯ ಮಾಡಿದ್ದೇವೆ, ಯಾರಿಗೆ ಅನ್ಯಾಯ ಮಾಡಿದೆವು, ಯಾವ ಯಾವ ಒಳ್ಳೆಯ ಕೆಲಸಗಳನ್ನು ಸಾಧಿಸಿದೆವು, ಎನ್ನುವುದನ್ನು ನೋಡಲು ನಿಮ್ಮ ಪುಸ್ತಕಗಳನ್ನು ತಿರವು ಹಾಕಿ ಎಂದು ನನ್ನ ಸ್ನೇಹಿತರಲ್ಲಿ ಹೇಳುತ್ತೇನೆ. ಅದಕ್ಕೋಸ್ಕರ 60 ದಿವಸಗಳ ಕಾಲ ಪ್ರವಾಸ ಮಾಡಬಾರದು ಎಂದು ಇಲ್ಲಿ ರೆಸಲ್ಯೂಷನನ್ನು ತಂದಿದ್ದಾರೆ.

ಇನ್ನೊಂದು ವಿಚಾರ ಸ್ವಾಮಿ. ಖೇದ್ಯಾ ಈಚೆಗೆ ನಡೆದಾಗ ದೇಶದಲ್ಲಿರುವ ಎಲ್ಲಾ ಸೆಕ್ರೆಟರಿಗಳೂ, ಚೀಫ್ ಸೆಕ್ರೆಟರಿಗಳು ಮತ್ತು ಚೀಫ್ ಮಿನಿಸ್ಟರು ಆದಿಯಾಗಿ including the Chief Minister or Chief Secretary and all secretaries the entire Government ; no Government was here, ಇಂತಹ ಪ್ರಸಂಗ ಅನೇಕ ಸಾರಿ ಮೈಸೂರು ಸರಕಾರಕ್ಕೆ ಒದಗಿದೆ. ಆದ್ದರಿಂದ ಚುನಾವಣೆಯ ಕಾಲದಲ್ಲಾದರೂ ಪಾವಿತ್ರತೆಯನ್ನು ಅಂತು, ಈ ರೀತಿಯಾಗಿ ಪ್ರವಾಸ ಮಾಡಬಾರದು ಎಂದು ಹೇಳುತ್ತೇನೆ. ಯಾರು ಇದಕ್ಕಾಗಿ ಟಂಕುರಾರ್ಪಣ ಮಾಡಿದರೋ ಅವರು ಪ್ರಜೆಗಳ ಹಿತವನ್ನು, ಪ್ರಜಾ ಪ್ರಭುತ್ವ ತತ್ವಕ್ಕೆ ಒಪ್ಪಿಕೊಂಡು ನಡೆಯುವಂತಹ ಜನತೆಗೆ ಅನುಕೂಲ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವಾಗುವಂತಹುದಲ್ಲ. ಇಂತಹ ಜತ್ತಿಯವರ ನಾಯಕತ್ವದಲ್ಲಿ ಇರತಕ್ಕ ನಮ್ಮ ಸ್ನೇಹಿತರುಗಳು ಅವರಿಗೆ ದುರ್ಯೋಧನ ಪಟ್ಟವನ್ನು ಕೊಡಿಸಿದ್ದಾರೆ. ಹಿಂದೆ ಯಾವ ರೀತಿಯಾಗಿ ಹಸ್ತಿನಾವತಿಯಲ್ಲಿ ಇದೇ ನನ್ನದು ಎಂದು ಕುರುಕ್ಷೇತ್ರ ಯುದ್ಧವಾದಾಗ ಅಧಿಕಾರದ ಅಮಲಿನಿಂದ ಕುರುಕ್ಷೇತ್ರದ ಯುದ್ಧದಲ್ಲಿ ಇದ್ದಾಗಲೂ ಕೂಡ ದುರ್ಯೋಧನನು ಹೇಳಿಕೊಂಡಂತೆ ಧನುರ್ಬಾಣಗಳನ್ನು ಕಳಗಿಟ್ಟು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ದುರ್ಯೋಧನನ ಪಟ್ಟವನ್ನು ಉಳಿಸಿಕೊಂಡರು ಶ್ರೀಮಾನ್ ಕೊತವಳೆಯವರು ದೊಡ್ಡದಾಗಿ ಪ್ರಶಂಸೆ ಮಾಡಿಕೊಳುತ್ತಾ ಈ ದೇಶದಲ್ಲಿ ಕಾಂಗ್ರೆಸ್ಸಿನವರೇ ರಾಜ್ಯಭಾರ ಮಾಡತಕ್ಕವರು, ತಮ್ಮ ಕೈಯಲ್ಲೇ ಅಧಿಕಾರವಿದೆ ಎನ್ನುವಂತೆ ಹೇಳಿದರು. ಅದರೆ ಅವರೇ ಹೇಳುವಂತೆ ಚುನಾವಣೆಯ ಕಾಲದಲ್ಲಿ ಜನಕ್ಕೆ ಬೇಕಾದಷ್ಟು ಕೆಲಸಗಳನ್ನು ಮಾಡಿಕೊಡುತ್ತೇವೆ. ಇಲ್ಲಿ ಸ್ಕೂಲು ಕೊಡುತ್ತೇವೆ, ಇಲ್ಲಿಗೆ ಎಸ್. ಇ. ಎಸ್. ಟ್ಯಾಂಕನ್ನು ಕೊಡುತ್ತೇವೆ, ಎಂದು ಹೇಳಿಕೊಂಡು ತಮ್ಮ ತಮ್ಮ ಕ್ಷೇತ್ರಗಳಲ್ಲಿರುವ ಜನಗಳ ಮುಂದೆ ಹೇಳಿಕೊಂಡು ಬಂದು ಅವರ ಕಣ್ಣಿಗೆ ಅರಸಿನ ಪುಡಿ ಹಾಕಿ ಹೇಳುವ ಪ್ರಚಾರಕ್ಕಾಗಿ ಈ ಕಾರ್ಯವನ್ನು ಮಾಡಲು ಅಧಿಕಾರಕ್ಕೆ ಬಂದಾಗ ಬಿಟ್ಟು ಬಿಡಬಹುದು. ಆದರೆ ತಮಗೆ ದೇಶದಲ್ಲಿ ನೀತಿ ಇದ್ದರೆ, ನೀವು ಕಾಂಗ್ರೆಸ್ಸಿಗೆ ಸೇರಿದ್ದು ಸತ್ಯವಂತರಾದ ಪಕ್ಷವಾಗಿದ್ದರೆ, ದೇಶದಾದ್ಯಂತ ಇರುವ ಜನ ನಿಮ್ಮನ್ನೇ ಹೆಚ್ಚಾಗಿ ಚುನಾಯಿಸುತ್ತಾರೆ. ಅದರಿಂದಲೇ ನಿಮ್ಮ ಕಾಂಗ್ರೆಸ್ಸಿನ ಕೈಯಲ್ಲೇ ಅಧಿಕಾರ ಇರುವಾಗ ಈ ರೀತಿ ಡಂಗುರವನ್ನು ಹಾಕಿಕೊಂಡು ಹೋಗುವುದನ್ನು ಎರಡು ತಿಂಗಳ ಕಾಲವಲ್ಲಾದರೂ ಪ್ರವಾಸಮಾಡುವುದನ್ನು ಬಿಡಿ ಎಂದು ಹೇಳುತ್ತೇನೆ; ಮಾನ್ಯ ಪಂಡಿತ ನೆಹರೂರವರಿಗೆ ಗೌರವವಿದ್ದರೆ, ನಿಮ್ಮ ಕಾಂಗ್ರೆಸ್ಸಿನ ಪಕ್ಷಕ್ಕೆ ನೀತಿ ಇದ್ದರೆ, ಗೌರವವಿದ್ದರೆ, ಇದರಲ್ಲಿ ಹೇಳಿರುವಂತೆ ಎರಡು ತಿಂಗಳ ಕಾಲ ಎಂದರೆ ಡಿಸೆಂಬರು 30 ನೇ ತಾರೀಖಿನಿಂದ ಮಾರ್ಚಿ 31 ನೇ ತಾರೀಖಿನವರಿಗೆ ಯಾವ ಚುನಾವಣೆ ಕಾರ್ಯದಲ್ಲಿಯೂ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡುವುದಿಲ್ಲ ಎಂದು, ಒಂದು ಆಲೋಚನೆ ಮಾಡುವ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise and meet after half-an-hour.

The House adjourned for Recess at Three of the Clock and reassembled at Thirty Minutes past Three of the Clock.

(Mr. DEPUTY SPEAKER in the Chair.)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏತಕ್ಕೆ ಈ ಹೌಸಿನಲ್ಲೇ ಫಿಕ್ಸ್ ಮಾಡುವುದಿಲ್ಲ. It is you who should decide in Consultation with the Speaker. ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ನಾನ್ ಅಫಿಶಿಯಲ್ ಬಿಸಿನೆಸ್ಸಿಗೆ ಜತ್ತಿ ಮಂತ್ರಿ ಮಂಡಲಿ ನಾಲ್ಕು ದಿನ ಕೊಡುವ ಬದಲು ಎರಡು ದಿನ ಕೊಟ್ಟರು ಎಂದು ಹೆಸರು ಬರುತ್ತದೆ; ನಮ್ಮ ರೈಟ್ ಕರ್ಟೇಲ್ ಮಾಡಿದರೂ ಎಂದು ಹೇಳುತ್ತಾರೆ. ನಿಮಗಾದರೂ ಬೇಜಾರಾಗಿದೆ ಅವರಿಗೂ ಬೇಜಾರಾಗಿ ಬಿಟ್ಟಿದೆ. ಮೆಂಬರ್ಸ್ ರೈಟ್ ಕರ್ಟೇಲ್ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ಸುಮ್ಮನೆ ಏನು ಹೇಳುತ್ತಿದ್ದೀರಿ ನಾಳೆ ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಳೆ ಒಂದು ಘಂಟೆಗೆ ಸಭೆ ಕರೆದಿದ್ದೀರಿ. ನಾಳೆ ಮೂರು ಘಂಟೆಗೆ ಹೇಳುತ್ತೀರೋ, ಇವತ್ತು 5 ಘಂಟೆ ಒಳಗೇ ಹೇಳುತ್ತೀರೋ.,

ಉಪಾಧ್ಯಕ್ಷರು.—ನಾಳೆ ಹೇಳುತ್ತೇನೆಂದು ಹೇಳಿಬಿಟ್ಟಿದ್ದೇನೆ.

†Sri S. D. KOTHAWALE (Chikodi).—Mr. Speaker Sir, I rise to oppose the resolution. I beg to inform the mover of this Resolution and his supporters Sir, through you that frustration is the mother of this resolution. They have been frustrated in gaining the confidence of the people and the electorate and that is why they are trying to find out some excuse for their failure. I may inform them Sir, that this is not the way of gaining the confidence of the people. They can get the confidence of the people by good performance and service rendered to the people. And it is in this matter Sir, unfortunately the Members of the Opposition and the Opposition Parties lack. They have not given a good account of themselves here or outside.

Sri V. SRINIVASA SHETTY.—Am I to understand that we have to account ourselves to you?

Sri C. J. MUCKANNAPPA.—You quarrel among yourselves like cats and dogs. Why do you come and tell us here?

Sri S. D. KOTHAWALE.—Because of a sense of frustration, such a resolution has been brought here. One thing I can point out. This resolution raises a serious point about the impartiality and fairness of our elections. I need not inform this House and the Members of the Opposition are also aware that the elections so far conducted have been declared and certified to be most impartial and most fair by the most impartial observers both in India and outside. Therefore, it is no good making allegations against Ministers and saying that the Ministers abuse their authority for the purpose of gaining success in the elections. It is not fair. It is far from truth; to blame others for the failure of the Members of the Opposition Party it is not fair.

Sir, this question can be treated in two ways-constitutional and practical. Constitutionally speaking Sir, there is no justification at all for bringing forward this resolution. Everybody knows how democracy is practiced here as elsewhere. There is no constitutional provision prohibiting either the Congress Party or any other Party holding power or carrying on propaganda for their own party members and for themselves.

Sri M. C. NARASIMHAN.—Nobody stated here that the Congress party should not carry on propaganda.

Sri S. D. KOTHAWALE.—Ministers also have a constitutional right and they do not cease to be members of the Party for the purpose of election. They have got a right to do propaganda for candidates of their Party. There should be no doubt on this matter and amount of quibbling can take away that position.

(Sri S. D. KOTHAWALE)

Sir, we know that when this Constitution was on the anvil, great brains of India were at work. I may say that Dr. Ambedkar who is acclaimed at modern MANU had so much to do with the framing the present constitution. I fail to understand how these failures of the opposition members can be made the reason to make use of the constitution to say something unfair about elections. It does lie well in the month of my Hon'ble friends to say that elections are not held impartially. At least one could only expect them to point out the constitutional impropriety in Ministers taking part in the propaganda for their party candidates. That being the case, I think this resolution lacks all constitutional justification.

Sir, we can now consider what is the practice that prevails elsewhere in this country and other countries, for the last several centuries. Take for instance, only the other day we heard the elections in the U.S.A. The republican party was in power. Nobody prevented the democrats from doing their own propaganda. You can lo k at the way the elections were held and the result was that democrates who were not in power were returned to power. Take again the case of Engla d. Every one knows that Churchil rendered yeomen service to the world and it was widely appreciated all over the country and the whole world. But still, English man never worried about it. In the General Elections that ensured the second world war, the Labour Party was returned to power. Even nearer how, in In ia, in the General Elections many candidates of the Ruling Party lose and many Ministers also lose; and the very fact that there are as many as 50 or 60 members opposite bears testimony to the fact that elections were conducted very impartially and very fairly. Merely because the Ministers in power takes part in the election campaign, there need be no fear and there is no certainty that the Congress will succeed and the Opposition Member will be defeated. Every one has seen how the Congress Ministers acquit themselves in a very very honest and impartial manner.

Therefore; I have said that the actual results of the elections show that the voters were not influenced by the Ministers and that the Ministers have equitted them selves in a very noble manner and that they never abused their powers. This resolution lacks all constitutional and practical justification.

It appears that our revered-leader Rajaji who is out of office and has formed a party called the Swatantry Party has said that the Ministry should resign six months prior to election. This principle was never advocated by the persons who advocate it now when they were in power and I fail to understand why they are advocating it now and I do not see any logic in their argument.

Sri M. C. NARASIMHAN.—Would you say the same thing when you come out of the party ?

Sri S. D. KOTHAWALE.—I will not say one thing inside and another thing outside. I will always stick to the same principle. I know why Hon'ble Members of the Opposition have brought this resolution. In the coming general elections they are bound to fail because they know how the Congress Party is serving the genuine interests of the people. I know why you are bringing this resolution, but we are not going to oblige you. I know you are preparing the ground for explaining the causes of your failure in the coming elections. We can read inbetween the lines and know what is in the mind of the Opposition Members. I do not want to take much time. As I said earlier, this resolution lacks constitutional and practical propriety and it does not deserve any consideration here and the House must throw it out.

† ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಬಗ್ಗೆ ಅನೇಕ ಅಂಶಗಳನ್ನು ಈಗತಾನೆ ಮಾತನಾಡಿದ ಶ್ರೀ ಕೊಥಾವಳೆಯವರು ಉಲ್ಲೇಖಿಸಿದ್ದಾರೆ. ನಾನಾದರೂ ಈ ನಿರ್ಣಯದ ಬಗ್ಗೆ ಹೇಳುವುದಿಷ್ಟೆ. ಈ ನಿರ್ಣಯ ಬಹಳ ಸಾಧುವಾದದ್ದು, ಬಹಳ ಸರಳವಾದದ್ದು ಮತ್ತು ಎಲ್ಲರೂ ಒಪ್ಪಿಕೊಂಡಂಥಾದ್ದೂ ಆಗಿದೆ ಎಂದು. ಶ್ರೀ ರಾಜಾಜಿಯವರಾದರೂ ಚುನಾವಣೆಗಳಿಗೆ ಆರು ತಿಂಗಳ ಮುಂಚೆಯೇ ಮಂತ್ರಿಗಳು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡಬೇಕೆಂದು ಹೇಳಿದ್ದರೆ ಈ ನಿರ್ಣಯದ ಸೂಚಕರು ಎರಡು ತಿಂಗಳ ಮುಂಚೆಯಾದರೂ ಆ ಅಧಿಕಾರಕ್ಕೆ ರಾಜೀನಾಮೆ ಕೊಡಿ ಎಂತ ಹೇಳಿದ್ದರೆ ಈ ನಿರ್ಣಯವನ್ನು ಸಹ ಒಪ್ಪಿಕೊಳ್ಳಲು ಏಕೆ ಸರ್ಕಾರದವರು ಇಷ್ಟು ಹಿಂಜರಿಯುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಇಷ್ಟಕ್ಕೂ ಕೂಡ ಸಾಧ್ಯವಿಲ್ಲವೆಂಬ ಈ ಸರ್ಕಾರದವರ ಧೋರಣೆಯನ್ನು ನೋಡಿದರೆ ಮುಂದೆ ಬರಲಿರುವ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಲು ಈ ಆಡಳಿತ ಪಕ್ಷ ಎಷ್ಟರಮಟ್ಟಿಗೆ ಹೆದರಿಕೊಂಡಿದೆ ಎಂಬುದು ಇದರಿಂದಲೇ ಎದ್ದು ಕಾಣುತ್ತಿದೆ. ಈ ದಿವಸ ರಾಜ್ಯದ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮಂತ್ರಿಗಳು ಕೇವಲ ಕಾಂಗ್ರೆಸ್ ಪಾರ್ಟಿಯೊಂದಕ್ಕೇ ಅವರು ಮಂತ್ರಿಗಳಾಗಿಲ್ಲ. ಅವರು ಮಂತ್ರಿಗಳಾಗಿರುವುದು ಇಡೀ ದೇಶಕ್ಕೆ. ಈ ದಿವಸ ರಾಜ್ಯದ ಮಟ್ಟದಲ್ಲಿರತಕ್ಕ ಬೊಕ್ಕಸದ ಹಣವನ್ನು ಈ ಮಂತ್ರಿಗಳು ಖರ್ಚು ಮಾಡುತ್ತಿದ್ದಾರಲ್ಲ—ಇದೆಲ್ಲ ಕೇವಲ ಬೊಕ್ಕಸಕ್ಕೆ ಕಾಂಗ್ರೆಸ್ ಪಾರ್ಟಿ ಒಂದರಿಂದಲೇ ಬಂದು ತುಂಬಿಲ್ಲ. ಒಂದು ದೇಶದ ಆಡಳಿತ ನಡೆಸತಕ್ಕ ಮಂತ್ರಿಗಳು, ವ್ಯಾಪಾರ ನಡೆಸತಕ್ಕ ಈ ಅಧಿಕಾರ ಪಕ್ಷ ಇರತಕ್ಕದ್ದು ಸಮಗ್ರ ದೇಶದ ಆಡಳಿತ ನಡೆಸುವುದಕ್ಕಲ್ಲದೆ ಕೇವಲ ಅವರ ಒಂದು ಕಾಂಗ್ರೆಸ್ ಪಾರ್ಟಿಯ ಪ್ರಚಾರ ಕಾರ್ಯಕ್ಕಾಗಲ್ಲ. ಮಂತ್ರಿಗಳು ಆಡಳಿತದಲ್ಲಿದ್ದುಕೊಂಡು ಚುನಾವಣೆಗೆ ನಿಂತರೆ ಅನೇಕ ದುರಾಚಾರಗಳು ಆಡಳಿತದಲ್ಲಿ ನಡೆಸುತ್ತವೆಂಬುದು ಸಾಮಾನ್ಯವಾದ ಮಾತಾಗಿದೆ. ಆದರೂ ಈಗತಾನೆ ಮಾತನಾಡಿದ ಸದಸ್ಯರು ವಾಸ್ತವಾಂಶಗಳನ್ನು ಹಿಂದುಮುಂದು ಮಾಡಿ ವಾದ ಮಾಡಿದ್ದನ್ನು ನೋಡಿದರೆ ಇದು ನಿಜವಾಗಿಯೂ ದೇಶದ ದುರ್ದೈವ! ಇದರ ಈ ಮಂತ್ರಿಮಂಡಲ ಹಾಗೂ ಈ ಆಡಳಿತಪಕ್ಷ ದೇಶದಲ್ಲಿರತಕ್ಕ ಪ್ರಜೆಗಳಿಗೆ ಅಷ್ಟು ಅಚ್ಚುಮೆಚ್ಚಾಗಿದ್ದುಕೊಂಡು, ಅವರ ಸೇವೆಯನ್ನೇ ಮಾಡಿ ಅವರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದ ಪಕ್ಷದಲ್ಲಿ ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಸದಸ್ಯರು ಚುನಾವಣೆಗೆ ನಿಲ್ಲಲು ಏಕೆ ಹೆದರಬೇಕು? ಅವರು ಮಂತ್ರಿಗಳನ್ನೇಕೆ ತಮ್ಮ ತಮ್ಮ ಚುನಾವಣೆ ಕ್ಷೇತ್ರಗಳಿಗೆ ಪ್ರಚಾರ ಮಾಡಲು ಎಳೆದುಕೊಂಡು ಹೋಗಬೇಕು? ಇವರ ಆಡಳಿತ ಅಷ್ಟು ನಿರ್ಮಲವಾಗಿ—ಕಾನೂನಿಗೆ ಅನುಗುಣವಾಗಿದ್ದಿದ್ದರೆ ಮಂತ್ರಿಗಳು ದೇಶವನ್ನೆ ಸುತ್ತಿ ತಮ್ಮ ಹೋಗಿ ಪ್ರಚಾರ ಮಾಡತಕ್ಕ ಅವಶ್ಯಕತೆಯಾದರೂ ಏನಿದೆ? ಬೊಕ್ಕಸದಲ್ಲಿರತಕ್ಕ ಹಣ ಇದೇ ದೇಶಕ್ಕೆ ಸೇರಿದ್ದು. ಆ ಹಣ ಎರಡು ಕೋಟಿ 30 ಲಕ್ಷ ಪ್ರಜೆಗಳಿಗೆ ಸೇರಿದ್ದು. ಆದರೆ ಆ ಜನರೆಲ್ಲ ಈ ದಿವಸ ಕಾಂಗ್ರೆಸ್ಸಿನಲ್ಲಿಲ್ಲ. ಅದಾಗ್ಯೂ

(ಶ್ರೀ ವೈ. ವೀರಪ್ಪ)

ಬೊಕ್ಕಸದಲ್ಲಿರುವ ಹಣವನ್ನು ಮಂತ್ರಿಗಳು ಖರ್ಚುಮಾಡಿಕೊಂಡು ತಮ್ಮ ಪಕ್ಷದ ಪ್ರಚಾರಕ್ಕೆ ಹೋಗತಕ್ಕದ್ದು ಯಾವ ಅನ್ಯಾಯ? ಯಾವ ಧರ್ಮ? ಆದರೆ ಶ್ರೀ ಕೊಥಾವಳಿ ಅವರು ಮಾಡಿದ ವಾದ ನೋಡಿದರೆ ನನಗಂತೂ ಇಷ್ಟು ಚೆನ್ನಾಗಿ ಕಾಣುವುದಿಲ್ಲ. ಈ ನಿರ್ಣಯದಲ್ಲಿ ಯಾವ ಒಂದು ದುರಾಸೆಯೂ ಇಲ್ಲ. ಜನರಮೇಲೆ ಒಂದು ಇನ್‌ಫ್ಲುಯೆನ್ಸ್ ತಂದು ಓಟನ್ನು ಗಳಿಸಬಾರದು ಎಂಬ ತತ್ವ ಒಪ್ಪಿಕೊಂಡಮೇಲೆ ಮಂತ್ರಿಗಳೇಕೆ ಧೈರ್ಯವಾಗಿ ರಾಜೀನಾಮೆ ಕೊಡಬಾರದು? ಈ ನಿರ್ಣಯವನ್ನೇಕೆ ಒಪ್ಪಿಕೊಳ್ಳಬಾರದು? ಬೇಕಾಗಿದ್ದರೆ ಮಂತ್ರಿಗಳು ತಮ್ಮ ತಮ್ಮ ವೈಯುಕ್ತಿಕ ಚುನಾವಣಾ ಕ್ಷೇತ್ರಗಳಲ್ಲಿ ಅವರ ವಿಚಾರವಲ್ಲಿ ಪ್ರಚಾರವನ್ನು ನಡೆಸಿಕೊಳ್ಳಲಿ. ಅದಕ್ಕೆ ನಾವು ಬೇಡವೆನ್ನುವುದಿಲ್ಲ. ಆದರೆ ಈ ರೀತಿ ಒಂದು ಅಧಿಕಾರ ಇಟ್ಟುಕೊಂಡು ಬೇರೊಂದು ಚುನಾವಣೆ ಕ್ಷೇತ್ರಗಳಿಗೆ ಹೋಗಿ ಪ್ರಚಾರ ಮಾಡುವುದು ರಾಜ್ಯಾಂಗಕ್ಕೆ ವಿರುದ ವಾದದ್ದು. ಹೀಗೆ ರಾಜ್ಯಾಂಗಕ್ಕೆ ವಿರುದ್ಧವಾಗಿದ್ದರೂ ಕೊಥಾವಳಿ ಅವರು ಏತಕ್ಕೆ ಹಾಗೆ ಹೇಳಿದರೂ ತಿಳಿಯದು.

ಶ್ರೀ ಬಿ. ಡಿ. ಜತ್ತಿ.—ಆ ರೀತಿ ಯಾವ ಆರ್ಟಿಕಲ್‌ನಲ್ಲಿ ಹೇಳಿದೆ ?

Sri Y. VEERAPPA.—I can bring the Constitution from the Library and show you the relevant Article.

ಆದುದರಿಂದ ನಾನೀಗ ಹೇಳುತ್ತೇನೆ ಆರೀತಿ ಅವರು ಒಂದು ಗೊಡ್ಡುವಾದ ಮಾಡಿದರೆ ಅದರಿಂದೇನೂ ಪ್ರಯೋಜನವಾಗಲಾರದು. ನೀವು ನಿಸ್ಪೃಹರಾಗಿದ್ದಿದ್ದರೆ............

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ ನಿಮ್ನ ಪಂಗಡ).—ಪಾಯಿಂಟ್ ಆಫ್ ಆರ್ಡರ್, ರಾಜ್ಯಾಂಗಕ್ಕೆ ಹಾಗೆ ಮಾಡುವುದು ವಿರುದ್ಧವಾದದ್ದು ಎಂತ ಹೇಳಿದರು. ಹಾಗೆ ಹೇಳುವುದು ಎಷ್ಟನೇ ಆರ್ಟಿಕಲ್ಲಿನಲ್ಲಿ ?

ಒಬ್ಬ ಸದಸ್ಯರು.—ನಿಮಗೆ ಕಾನ್‌ಸ್ಟಿಟ್ಯೂಷನ್ನನ್ನು ಓದುವುದಕ್ಕೆ ಬಂದರೆ ತಾನೆ? ನಿಮಗೇಕೆ ಆ ಆರ್ಟಿಕಲ್ಲಿನ ವಿಚಾರ ?

ಶ್ರೀ ವೈ. ವೀರಪ್ಪ.—ಚುನಾವಣೆಗಳನ್ನು ನಡೆಸತಕ್ಕ ಕಾಲದಲ್ಲಿ ಒತ್ತಾಯಮಾಡಿ ಇಲ್ಲವೇ ಜನರನ್ನು ಒಂದು ಆಶೋತ್ತರಗಳಿಗೆ ಗುರಿಮಾಡಿ ಓಟನ್ನು ಗಳಿಸಬಾರದೆಂದು ಅದರಲ್ಲಿ ಹೇಳಿದೆ. ಶಾಶನ ಬದ್ಧವಾಗಿ ಇದು ತಪ್ಪು ಎಂತ ತೋರಿಸಬಲ್ಲೆ. ಪುಸ್ತಕಗಳೀಗ ನನ್ನಲ್ಲಿಲ್ಲ. ಈ ಸರ್ಕಾರ ಈಗಾಗಲೇ ಜನರಮೇಲೆ ಹೇರಿರತಕ್ಕ ತೆರಿಗೆಗಳ ಹೊರೆಯನ್ನು ಅವರು ಜ್ಞಾಪಿಸಿಕೊಂಡು ಅವರಿಗೆ ಈಗಾಗಲೇ ಕೈ-ಕಾಲುಗಳೂ ಎದೆ-ನಡುಗುತ್ತಿದೆ. ಈ ವಿಚಾರ ಸಾರ್ವಜನಿಕರಿಗೆಲ್ಲಾ ಈಗಾಗಲೇ ಗೊತ್ತಾಗಿದೆ. ಸರ್ಕಾರದವರು ಈ ದಿವಸ ಆಡಳಿತ ನಡೆಸುತ್ತಿರುವ ನೀತಿ ಹೇಗೆ ಇದೆಯೆಂದರೆ "ಮಗುವನ್ನು ತೂಗುತ್ತಾರೆ—ಅದನ್ನು ಮಲಗುವಾಗ ಮತ್ತೆ ಗಿಲ್ಲುತ್ತಾರೆ" ಎಂಬರೀತಿ ಇರುತ್ತೆ. ಈ ದಿವಸ ಈ ಆಡಳಿತಪಕ್ಷ ಅಷ್ಟು ನಿರ್ವಂಚನೆಯಿಂದ ತೃಪ್ತಿಕರವಾಗಿ ಆಡಳಿತ ನಡೆಸದಿದ್ದ ಪಕ್ಷದಲ್ಲಿ ಇವರೇಕೆ ಚುನಾವಣೆಗಳಲ್ಲಿ ಮಹಾತ್ಮಾಗಾಂಧಿ ಫೋಟೋ ಮತ್ತು ನೆಹರೂ ಫೋಟೋ ಹಿಡಿದುಕೊಂಡು ಹೋಗಬೇಕಾಗಿರುತ್ತೆ? ಪ್ರಜಾಪ್ರಭುತ್ವ ನೀತಿಗೆ—ತತ್ವಗಳಿಗೆ ಅನುಗುಣವಾಗಿ ಆಡಳಿತ ನಡೆಸಿದ್ದರೆ ಜನರು ಇವರನ್ನು ಪ್ರೀತಿಸುತ್ತಲೇ ಇದ್ದರು. ಆದರೆ ಹಾಗೆ ಮಾಡಿಲ್ಲ—ಅವರ ಪ್ರೀತಿಯನ್ನೂ ಗಳಿಸಿಲ್ಲ. ಆದುದರಿಂದ ಏನೋ ಮಾಡಿ, ಹೇಗೋ ಮಾಡಿ ಜನರಿಗೆ ಇಲ್ಲಸಲ್ಲದ ಒತ್ತಾಯಗಳನ್ನು ಹಾಕಿ, ಅವರಿಗೆ ಆಶೋತ್ತರಗಳನ್ನು ಹೇಳಿ ಓಟುಪಡೆಯತಕ್ಕ ಅವಕಾಶವಿರುತ್ತೆ. ಅದರ ಬಗ್ಗೆ ಹೆಚ್ಚು ಉಲ್ಲೇಖಿಸತಕ್ಕ ಅಗತ್ಯವಿಲ್ಲ. ಈ ದಿವಸ ಆಡಳಿತಪಕ್ಷ ಈ ನಿರ್ಣಯವನ್ನು ಒಪ್ಪಿಕೊಳ್ಳಲು ತಯಾರಿಲ್ಲವೆಂದರೆ ಅದು ತೀರಾ ಅವರ ಅಂಜುಬುರುಕತನವನ್ನು ತೋರಿಸುತ್ತದೆಯೋ—ಇಲ್ಲವೇ ಎಂಬುದನ್ನು ಅವರು ಅವರ ಆತ್ಮ ಪರಿಶೋಧನೆ ಮಾಡಿಕೊಂಡರೆ ಅದು ಅವರಿಗೇ ವೇದ್ಯವಾಗುತ್ತದೆ.

ಇದು ಸರಳವಾದ ನಿರ್ಣಯ. ಯಾವ ವಿಧಗಳಿಗೂ ವಿರೋಧವಾದುದಲ್ಲ, ಈಗಲಾದರೂ ಇವರು ಈ ನಿರ್ಣಯ ಒಪ್ಪಿಕೊಂಡು—ಇವರು ಜನರಲ್ಲಿ ಎಷ್ಟರ ಮಟ್ಟಿಗೆ ಪ್ರೀತಿ ವಿಶ್ವಾಸ ಗಳಿಸಿದ್ದಾರೆ ಎಂಬುದನ್ನು ಪರೀಕ್ಷೆ ಮಾಡಿಕೊಳ್ಳಲು ಇದು ತುಂಬಾ ಸಹಾಯವಾಗಿದೆ.

ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಎರಡು ತಿಂಗಳುಕಾಲ ಮೊದಲು ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟು ಚುನಾವಣೆಗೆ ಅವರು ನಿಲ್ಲಬೇಕು. ಸ್ವಾಭಾವಿಕವಾಗಿ ಇರತಕ್ಕ ಬಗ್ಗೆ ಅವರು ಈ ನಿರ್ಣಯ ತಂದಿದ್ದಾರೆ. ಈ ನಿರ್ಣಯ ಸಮಂಜಸವಾಗಿಲ್ಲವೆಂದು ಕಾಂಗ್ರೆಸ್ ಪಕ್ಷದ ಸದಸ್ಯರು ಹೇಳುವುದನ್ನು ನೋಡಿದರೆ ಅವರು ಎಂಥ ಮನಸ್ಸು ಇಟ್ಟುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ವಿರೋಧಿ ಪಕ್ಷವೂ ಸಹ ಬೆಳೆಯಬೇಕು. ಎಲ್ಲ ಉಮೇದವಾರರಿಗೂ ಸರಿಯಾಗಿ ಉತ್ತೇಜನ ದೊರೆಯಬೇಕು ಅಮೇರಿಕಾ ಇಂಗ್ಲೆಂಡ್ ಕೆನಡಾ ದೇಶಗಳಲ್ಲಿ ಯಾವರೀತಿ ಪ್ರಜಾಪ್ರಭುತ್ವವನ್ನು ಬೆಳೆಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ನೋಡಬೇಕು. ನಮ್ಮ ದೇಶದಲ್ಲಿ ಚುನಾವಣೆ ನಡೆಸುವ ಪದ್ಧತಿ ಅಷ್ಟು ಚೆನ್ನಾಗಿಲ್ಲ. ಅಂಕಿಅಂಶಗಳನ್ನು ಕೊಟ್ಟು ಇದನ್ನ ಚಾಲೆಂಜ್ ಮಾಡಿ ಅದಕ್ಕೆ ರುಜುವಾತ ಕೊಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಜನರಲ್ ಇಲೆಕ್ಷನ್ ಹತ್ತಿರ ಬಂದಿದೆ. ಅಗ್ಗೆ ಜನಗಳ ಮುಂದೆ ಚಾಲೆಂಜ್ ಮಾಡಿ.

ಶ್ರೀ ವೈ. ವೀರಪ್ಪ.—ನಿಮ್ಮ ಸಂಕುಚಿತ ಮನೋಭಾವನೆಯ ಬಗ್ಗೆ ಆತ್ಮ ನಿರೀಕ್ಷಣೆ ಮಾಡಿಕೊಳ್ಳಿ ಅಂದರೆ ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ಅದನ್ನು ಏತಕ್ಕೆ ಹೇಳುತ್ತಿದ್ದೀರಿ? ಅದನ್ನು ಇದಕ್ಕೂ ಸಂಬಂಧವೇನು? It is irrelevant.

ಶ್ರೀ ವೈ ವೀರಪ್ಪ.—ಹನುಮಂತನ ಬಾಲ ಬೆಳೆದ ಹಾಗೆ ಬೆಳೆಯುತ್ತದೆ. ಅದು ಇರಲಿ. ಮುಂದಿನ ಚುನಾವಣೆಯಲ್ಲಿ ಸಾರ್ವಜನಿಕರಿಂದ ನಿಮಗೆ ಓಟು ಸಿಕ್ಕುವದಿಲ್ಲವೆಂಬ ಹೆದರಿಕೆಯಿಂದ ನಿಜವಾಗಿಯೂ ಕೂಡ ಈ ನಿರ್ಣಯಕ್ಕೆ ನೀವು ಅನುಮತಿ ಕೊಡುವದಿಲ್ಲ. ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇಕ್ಕಟ್ಟು ಉಂಟಾಗಿದೆ. ಈ ಬಡಕು ಬಿರುಕು ಮುಚ್ಚುವದಕ್ಕೆ ನೀವು ಪ್ರಯತ್ನಿಸುತ್ತಿದ್ದೀರಿ ಸಾರ್ವಜನಿಕರಿಂದ ವಸೂಲು ಮಾಡಿರುವ ಹಣವನ್ನು ದುಂದು ಮಾಡುತ್ತೀರಿ. ಕಾಂಗ್ರೆಸ್ಸಿಗರಲ್ಲಿಯ ಬಡಕು ಮುಚ್ಚುವದಕ್ಕೆ ಸಮಂಜಸ ಕಾರಣ ಕೊಡದೇ ಏಕದಂ ನಾಲ್ಕು ಜನ ಮಂತ್ರಿಗಳನ್ನು ಹೊಸದಾಗಿ ನೇಮಕ ಮಾಡಿಕೊಂಡಿದ್ದೀರಿ. ಸಾರ್ವಜನಿಕರ ದುಡ್ಡು ಹಾಳುಮಾಡುತ್ತಿದ್ದೀರಿ. ನಿಮ್ಮ ಮೇಲೆ ನಿಮ್ಮ ಪಕ್ಷದ ಸದಸ್ಯರೇ ಹೊರಿಸಿದ 29 ಚಾರ್ಜುಗಳು ಮಂತ್ರಿಗಳ ನೇಮಕವಾದ ಕೂಡಲೇ ಏಕದಂ ಮಾಯವಾಗಿ ಹೋಗಿವೆ.

ಉಪಾಧ್ಯಕ್ಷರು.—ಸಭೆಯ ಮುಂದೆ ಚರ್ಚೆಗೆ ಇರುವ ನಿರ್ಣಯದ ಬಗ್ಗೆ ಮಾತನಾಡಿರಿ. ಈ ರೀತಿ ಮಾತನಾಡಿದರೆ ಅದಕ್ಕೆ ಲಂಗು ಇಲ್ಲ ಲಗಾಮು ಇಲ್ಲ.

ಶ್ರೀ ವೈ. ವೀರಪ್ಪ.—ಮಂತ್ರಿಗಳಾಗಿದ್ದವರು ತಮ್ಮ ಸ್ವಂತದ ಚುನಾವಣೆ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ಮಾಡಲಿ. ಬೇರೆ ಕ್ಷೇತ್ರಕ್ಕೆ ಹೋಗಿ ಪಾರ್ಟಿ ಕ್ಯಾಂಡಿಡೇಟ್ ಬಗ್ಗೆ ಪ್ರಚಾರ ಮಾಡಬೇಡಿ. ಈ ರೀತಿ ಮಾಡಿದರೆ ಪ್ರಜಾಪ್ರಭುತ್ವ ನೀತಿಗೆ ವಿರೋಧವಾಗುತ್ತದೆ. ವಾಸ್ತವಾಂಶ ನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಣಯಕ್ಕೆ ಒಪ್ಪಿಗೆ ಕೊಡಬೇಕೆಂದು ಒತ್ತಾಯಪೂರ್ವಕ ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಸ್ವಾಮಿ ಈಗ ಸಭೆಯ ಮುಂದೆ ಚರ್ಚೆಗೆ ಇರತಕ್ಕಂಥ ನಿರ್ಣಯವನ್ನ ವಿರೋಧಿಸಿ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಸಾರ್ವತ್ರಿಕ ಚುನಾವಣೆಗೆ ಎರಡು ತಿಂಗಳು ಕಾಲ ಮುಂಚಿತವಾಗಿ ಮಂತ್ರಿಗಳು ರಾಜೀನಾಮೆ

(ಶ್ರೀ ಬಿ. ಎಚ್. ಬೋರಣ್ಣಗೌಡ)

ಕೊಡಬೇಕು. ಮಂತ್ರಿಗಳು ಚುನಾವಣೆ ಪ್ರಚಾರ ಭಾಷಣ ಮಾಡಕೂಡದು ಎಂದು ನಿರ್ಣಯದಲ್ಲಿ ಹೇಳಿದೆ. ಆದರೆ ಮಂತ್ರಿಗಳು ಚುನಾವಣೆ ಕ್ಷೇತ್ರಗಳಿಗೆ ಹೋಗತಕ್ಕಂಥದ್ದು ನ್ಯಾಯ ಎಂದು ನಾನು ಹೇಳುತ್ತೇನೆ. ಮಂತ್ರಿಗಳು ಚುನಾವಣೆಗೆ ಹೋಗುವಾಗ್ಗೆ ಸರಕಾರಿ ಕಾರು ತೆಗೆದುಕೊಂಡು ಹೋಗಿರ ತಕ್ಕಂಥಾದ್ದು ಇಲ್ಲವೇ ಇಲ್ಲ. ನಮ್ಮ ಕಾಂಗ್ರೆಸ್ ಪಾರ್ಟಿ ಫಂಡ್ ಇರುತ್ತದೆ. ಅದನ್ನು ಖರ್ಚುಮಾಡುತ್ತಾರೆ. ಮಂತ್ರಿಗಳು ಅನೇಕ ಕೆಲಸ ಕಾರ್ಯಗಳಿಗಾಗಿ ಬೇರೆ ಬೇರೆ ಪ್ರದೇಶಗಳಿಗೆ ಹೋಗಬೇಕಾಗುತ್ತದೆ. ಸರಕಾರಿ ಕೆಲಸಕ್ಕೆ ಸರಕಾರಿ ಕಾರು ತೆಗೆದುಕೊಂಡು ಹೋಗುತ್ತಾರೆ. ಚುನಾವಣೆ ಪ್ರಚಾರ ಕಾರ್ಯಕ್ಕೆ ತೆಗೆದುಕೊಂಡು ಹೋಗಿಲ್ಲ ಮತ್ತು ಮುಂದೆಯಾದರೂ ಹೋಗುವದಿಲ್ಲ. ವಿರೋಧ ಪಕ್ಷದವರು ಅರ್ಥಕ್ಕೆ ಅನರ್ಥ ಮಾಡಿಕೊಳ್ಳುವುದು ಏತಕ್ಕೆ ? ಕಾಂಗ್ರೆಸ್ ಸಂಸ್ಥೆಯ ಕೆಲಸವನ್ನು ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಕಾಂಗ್ರೆಸ್ ಪಕ್ಷದವರು ದೇಶದ ಅಭಿವೃದ್ಧಿಗೋಸ್ಕರ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಮಂತ್ರಿಗಳು ಹೋಗಕೂಡದು ಎಂದು ಹೇಳುವುದು ಯಾವ ನ್ಯಾಯ ? ಅದರಲ್ಲಿ ತಪ್ಪೇನಿದೆ ? ವಿರೋಧಿ ಪಕ್ಷದ ಸದಸ್ಯರು ಯಾವ ಕ್ಷೇತ್ರಕ್ಕೆ ಬಂದರೂ ಕೂಡ ಮಂತ್ರಿಗಳು ಬಂದಾಗ್ಗೆ ತೊಡಕು ಉಂಟು ಮಾಡುತ್ತಾರೆ. ಈ ರೀತಿ ಮಾಡುತ್ತಿರುವ ಬಗ್ಗೆ ಅವರು ಆತ್ಮ ನಿರೀಕ್ಷಣೆ ಮಾಡಿ, ಎದೆ ಮುಟ್ಟಿನೋಡಿ ಹೇಳಬೇಕು. ಭಾಷಣ ಮಾಡತಕ್ಕ ಕಾಲದಲ್ಲಿ ತಮಟೆ ಹೊಡಿಸುವುದು, ಪೋಲೀಸರನ್ನು ಬಡಿಯುವುದು, ಈ ರೀತಿ ಆತಂಕಗಳನ್ನು ಒಡ್ಡಿದ್ದಾರೆ. ಯಾರು ಯಾರು ಈ ರೀತಿ ಮಾಡಿದ್ದಾರೆಂದು ಪಟ್ಟಿಮಾಡಿ ಕೊಡಬಲ್ಲೆ. ಇಷ್ಟು ಆತಂಕಗಳನ್ನೊಡ್ಡಿದರೂ, ಕಾಂಗ್ರೆಸ್‌ನವರಿಗೆ ಚುನಾವಣೆಗಳಲ್ಲಿ ಆರಿಸಿ ಬರಲು ಶಕ್ತಿ ಇದೆ. ಎದುರುಪಕ್ಷದವರಿಗೆ ಆ ಶಕ್ತಿ ಇಲ್ಲದೆ ಇದ್ದರೆ ಇಂಥ ಆತಂಕಗಳನ್ನೊಡ್ಡುವುದು ಸರಿಯಲ್ಲ.

ದೇಶದ ಮಂತ್ರಿಗಳಾದ ಮಾತ್ರಕ್ಕೆ ಪಕ್ಷದ ಕೆಲಸ ಕಾರ್ಯಗಳನ್ನು ಮಾಡಬಾರದೆಂದು ವಿಧಾಯಕವಾಗಿಲ್ಲ. ರಾಜ್ಯಾಂಗದಲ್ಲಿರುವುದಕ್ಕೆ ವಿರೋಧವಾಗಿ ನಡೆಯುತ್ತಾರೆಂದು ಮಾನ್ಯ ವೀರಪ್ಪನವರು ಹೇಳಿದರು. ರಾಜ್ಯಾಂಗವನ್ನು ಅವರೂ ಓದಿದ್ದಾರೆ. ನಾವೂ ಓದಿದ್ದೇವೆ. ಚುನಾವಣೆಗಳ ಪವಿತ್ರತೆಯನ್ನು ಸಾರ್ವಜನಿಕರಾಗಲೀ, ಕಾಂಗ್ರೆಸ್ ಪಕ್ಷದವರಾಗಲೀ ಕಾಪಾಡತಕ್ಕದ್ದು ಮುಖ್ಯ. ಆದರೆ ಈ ವಿಚಾರದಲ್ಲಿ ಅವರು ಇಳಿದಂಥ ಮಟ್ಟಕ್ಕೆ ನಾವು ಇನ್ನೂ ಇಳಿದಿಲ್ಲ. ಅದು ಎಲ್ಲರಿಗೂ ಗೊತ್ತಿದೆ. ನಮ್ಮ ಪಕ್ಷವನ್ನು ಇಷ್ಟು ಬಹುಮತದಲ್ಲಿರುವಂತೆ ಚುನಾಯಿಸಿರುವುದು ಎಲ್ಲರಿಗೂ ಗೊತ್ತಿದೆ. ಇದೇ ಸಾಕ್ಷಿ.

ದೇಶದಲ್ಲಿ ನ್ಯೂನತೆಗಳಿದ್ದರೆ, ಅವೆಲ್ಲವನ್ನೂ ಕಾಂಗ್ರೆಸ್‌ನವರೇ ತಂದೊಡ್ಡಿದ್ದಾರೆ ಎಂದು ಹೇಳಿದರು. ಶ್ರೀಯುತರುಗಳಾದ ಮುಕ್ಕಣ್ಣಪ್ಪ, ವೀರಪ್ಪ, ರೇವಣಸಿದ್ದಪ್ಪ ಇವರೆಲ್ಲಾ ಕ್ಷಣ ಕ್ಷಣಕ್ಕೂ ಈ ರೀತಿಯಾಗಿ ಮಾತನಾಡುತ್ತಾರೆ. ಯಾವುದಾದರೂ ಬಿಲ್ ಬರಲಿ, ಯಾವುದಾದರೂ ವಿಷಯ ಚರ್ಚೆಗಳಿಗೆ ಬರಲಿ, ಪ್ರತಿಸಾರಿಯೂ ಈ ರೀತಿ ಟೀಕೆ ಮಾಡುತ್ತಾರೆ. ಒಂದು ಕೆಲಸ ಮಾಡುವಾಗ ಅದರಲ್ಲಿ ಯಾವುದಾದರೂ ಕೆಡಕಿದ್ದರೆ, ಅದನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿದರೆ ಒಪ್ಪಿಕೊಳ್ಳಬಹುದು. ಆದರೆ ಅವರು ಮಾತನಾಡುವುದರಲ್ಲಿ ಅವರಿಗಿರುವ ಅಸಮಾಧಾನ ವ್ಯಕ್ತವಾಗುತ್ತದೆ. ಏನೆಂದರೆ ಮುಂದೆ ಅವರ ಕ್ಷೇತ್ರದಲ್ಲಿ ಭವಿಷ್ಯ ಯಾವ ರೀತಿ ರೂಪಿಸುತ್ತದೆ ಎನ್ನುವುದಕ್ಕೆ ಅವರು ಹೀಗೆಲ್ಲಾ ಮಾತನಾಡುತ್ತಾರೆಂದು ಗೊತ್ತಾಗುತ್ತದೆ. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ತಯಾರಿಲ್ಲ.

ಈಗ ತಂದಿರುವ ನಿರ್ಣಯ ಅಪ್ರಸ್ತುತ ಮತ್ತು ಅರ್ಥವಿಹೀನವಾದ್ದು. ಈ ನಿರ್ಣಯವನ್ನು ತಂದಿರುವ ಮಾನ್ಯ ಮಿತ್ರರಿಗೆ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಜನಗಳಲ್ಲಿ ಹೋಗಿ ಪ್ರಚೋದನೆ ಮಾಡಿದರೆ ಅದು ತಪ್ಪಾಗುತ್ತದೆ, ಪ್ರಚಾರ ಮಾಡಿದರೆ ಅದು ತಪ್ಪಾಗುವುದಿಲ್ಲ. ಪ್ರಚಾರ ಮಾಡುವುದನ್ನು ಪ್ರಚೋದನೆ ಎಂದು ತಿಳಿಯಕೂಡದು. ನಮ್ಮ ಪಕ್ಷಕ್ಕೆ ಹೆಚ್ಚಿನ ಬೆಂಬಲಿಗರು ಬರಲಿ.

ನಮ್ಮ ಪಕ್ಷಕ್ಕೆ ಹೆಚ್ಚಿನ ಜನರು ಬರಲ ಎಂದು ಪ್ರಚಾರ ಮಾಡುವುದಕ್ಕೆ ನಮ್ಮ ಮಂತ್ರಿಗಳು ಹೋಗುವುದು ಸೂಕ್ತವಾಗಿದೆ. ಆದುದರಿಂದ ಮಾನ್ಯ ಸ್ನೇಹಿತರು ಈ ನಿರ್ಣಯವನ್ನು ಹಿಂತೆಗೆದು ಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

Sri V. SRINIVASA SHETTY.—Sir, there is lot of misunderstanding with regard to the resolution. Most of us have gone at a tangent. The resolution is most innocuous. I do not think there is anything abnoxious or objectionable in it. If we are a civilized society—I hope, we are one—this asks all the Ministers in office not to take advantage of their own position either for themselves or for their party. This is a procedure followed in England. They do not use their position for propaganda activities. We do not object a Minister going to open a hostel. There is no bar on their official activities. The resolution only says that the Ministers should not use their position for the advacement of their party people and for the advancement of their election work. Is it fair that they should use their position for the propaganda purpose ? Sir, I do not go to the extent, as Rajaji said, of saying they should resign the office six months before the elections. I do not think this is done in any country. But, what I say is : please retrain yourself ; please do not misuse your position for the benfit of your party.

Sir, Members on the other side made all claims as to their fair success in the elections. It is not fair. Can they point out any country where the opposition has come up to the level as it is in this country in this short period of 13 or 14 years after independence ? The Opposition have formed the Government in one or two States. Nobody can expect the Opposition to establish Governments in all the States. Even in England, it is not possible for the opposition to capture all the seats though the percentage of literacy is 92. Sir, the pity of it, my friends on the other side do know history ; they do not study ; that is the difficulty. Fortunately or unfortunately, you came to power after the Britishers You are the inheritors of history. You have taken the advantage of the independence struggle. Sir, it is not the Congress party only that struggled for independence. Practically, every party, even communist and the P. S. P. people fought for it: But, you are able to take advantage of it and we are not able to take advantage of it. We are not sorry for it. What we say is: let us be decent in elections. We have copied from England their democratic system and their parliamentary system. Can we not copy their decency, their methods of propaganda and their election methods ?

Sri B. D. JATTI.—Do they resign ?

Sri V. SRINIVASA SHETTY.—No. I have not said that. I have not said that you should resign ; perhaps, the Hon'ble Chief Minister did not hear me properly. The resolution refers that you should not use your powers for election. I did not say that you should resign. I am against your resignation. I want you to be in power. But what all I say is : Gentleman, do not misuse your power for the sake of the party. This is a very innocuous resolution Luckily, the Resolution

(Sri V. Srinivasa Shetty)

does not say that the Chief Minister or any Minister should not go to their constituencies for doing propaganda for themselves. Therefore there is nothing objectionable or obnoxious in the resolution. It is a healthy convention that is sought to be set up by the resolution. It is a convention established in England. I will give an example. When Atlee was the Prime Minister of England he went to his constituency. Do you know who drove his car? His wife. He went in a private car, driven by his wife. On the contrary we know how things are being done here. Our people are backward, the majority of them are so. The names of Mahatma Gandhi, Pandit Nehru are revered; they are sacred, they are holy. When a Minister goes to a place, all the officials of the area are at his beck and call and leaders whether Congress or non-Congress gather as a natural courtesy and they sorround the Minister. What will be the effect on the ordinary man. Power is there for good or for bad. It is not money alone that corrupts; power also corrupts. The common man thinks that the Minister and so many other important people have gathered to lend support to the Congress candidate as against those opposing him. I am not saying that you will misuse Government authority in the coming general elections. But there should be self-restraint. There is a saying that 'justice should not only be done, but must appear to have been done'. The Chief Minister may not do any harm at all. But intentionally or otherwise, when he goes to the constitnency of a Congress candidate, the voters may be swayed into thinking that all the fuss is because the Chief Minister wants support for his party's candidate. With all the pomp and show that sorrounds the Chief Minister's visit the people are likely to confuse the party with the Government. The people should feel that there is freedom of voting in this country. I am not going into the history of the Congress party or any other party. This resolution does not apply to Congressmen alone. I do not know why you should jump to the conclusion that the resolution is intended as an affront and a curb on the Congress party. Supposing my friend Mr Narasimhan forms a Government—as they have done in Kerala—we would certainly say the same thing. This resolution does not say that Congressmen alone should not travel during elections.

Sri G. Sivappa.—If Narasimhan forms a Government, there would be no election at all.

Sri V. Srinivasa Shetty.—He cannot adopt Russian tactics in India. We are a governed by a Constitution and unless it is scrapped, elections would have to be held.

As I said, the resolution does not apply to the Congress party alone. We have had the experience of the P.S.P. and Communist Governments, of the Congress cum Ganatantra Parishad Governments. The Congress is not completely in power throughout the country. So there is no need to get wild over the resolution. It might have been

brought forward by a Communist Member and supported by the P.S.P. It does not mean that because it comes from the Opposition it should be opposed by the Congress. It sets up a healthy principle. Before the Kerala elections, Pandit Nehru was pressed upon to go to Kerala, but he refused, though it was a prestige fight in Kerala. This is the sort of restraint that we request you should impose on yourselves.

In conclusion I would read a para from a book on 'pre-elections' which enunciates four conditions necessary for free and fair elections:

"First, an independent judiciary to interpret the electoral law, second, an honest, competent, non-partisan adminstration to run elections, a developed system of political parties well enough organised to put their policies, traditions and teams of candidates before the electorate and general response throughout the political community to certain rather vague rules of the game which limit the struggle for power because of the unspoken sentiment that if the rules are not observed, more or less faithfully, the game will itself disappear admidst the wreckage of the whole system."

Therefore we do not want you to ruin the system of elections by resorting to foul practices. If you do that, the succeeding Governments of other parties will do the same thing and then you will have no voice to prevent them. As a political party, as a fifty years of history behind you, a party which represents the whole country, a party which has to set-up a model to the whole country, I request you not to misuse your official authority during election period. By all means sweep the polls by fair means. I know, we all know, that it is not impossible, you will come well off in the next elections. You have power, you have prestige and the money bags behind you. Everytning is in your favour. With all the advantage on your side, why should you use the power vested in the Chief Minister or Members of the cabinet. The names of Mahatma Gandhi and Pandit Nehru are sufficient. The history of the Congress is behind you. Please then, for Heavens' Sake, do not misuse your power for atleast two months before the elections. Let us not oppose each other now on this resolution. I am not one of those who believe in opposition.

[Sri K. KENCHAPPA Chairman in the Chair]

4-30 P.M.

Of course, you will be free to abuse us and we are free to abuse you during the elections. That is another matter. But we shall not indulge in abuses in the House. There are senior Members in the House. I know generally it is a question of prestige because even the most minor amendment and the most minor suggestion and most minor resolution coming from the Opposition is not accepted by the Government. Ganerosity has dried up and decency has dried up. I had even talks with the Members of Parliament, Sir, on this matter. I understand even the Prime Minister is very often quite prepared to

(Sri V. SRINIVASA SHETTY)

concede a good thing even if it comes from the Opposition Party I therefore appeal to the Members of the Cabinet to display the same spirit and see the point of view of the other side also. Wisdom lies in seeing the opponents point of view. What is in question is: there is some fear that you may misuse your powers. You may be very fair and it is just possible that you may not do it at all. But what is wrong in admitting the possibility though there may be no misuse. I therefore request the Cabinet Minister to see from our point of view and from whatever source this resolution comes and see that healthy precedent is set up in the elections, Sir.

†ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಸ್ವಾಮಿ, ನಮ್ಮ ಮುಂದಿರತಕ್ಕ ನಿರ್ಣಯ ಬಹಳ ಉತ್ತಮವಾದುದು ಮತ್ತು ಅದನ್ನು ತಂದಿರತಕ್ಕವರು ಯಾರೇ ಆಗಿರಲಿ, ಅವರ ಧ್ಯೇಯ ಒಳ್ಳೆಯದು. ಆದ್ದರಿಂದ ಈ ನಿರ್ಣಯದ ಅಂಶ ಏನು ಎನ್ನತಕ್ಕದ್ದನ್ನು ಚೆನ್ನಾಗಿ ಸರ್ಕಾರದವರು ಆಲೋಚನೆ ಮಾಡಿ ತೀರ್ಮಾನಿಸಬೇಕು ಎಂದು ನಾನು ಅಧಿಕಾರ ವರ್ಗದವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri K. S. SURYANARAYANA RAO.—I am given to understand that Sri Shankarappa has already taken part in the debate on this resolution. It could be verified from the record. We only want to set up healthy precedent can a Member be allowed to speak twice on the same subject? If he has already taken part in the debate, he may not be permitted to speak again.

Mr. CHAIRMAN.—I do not know whether he has already spoken on the subject. Let him speak.

ಶ್ರೀ ಕೆ. ಎಫ್. ಪಾಟೀಲ್.— ಇನ್ನು ನಾಲ್ಕು ಜನರು ಮಾತನಾಡುವವರು ಯಾರೋ ಇದ್ದಾರೆಂದು ವಿರೋಧ ಪಕ್ಷದಲ್ಲಿ ಹೇಳಿದ್ದಾರೆ, ಅವರ ಹೆಸರುಗಳನ್ನು ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಆದ್ದರಿಂದ ಚುನಾವಣೆಗೆ 2-3 ತಿಂಗಳುಗಳ ಮುಂಚೆ ಮಂತ್ರಿಗಳು ಸಂಚಾರ ಮಾಡುವುದಕ್ಕೆ ಹೋಗಬಾರದು ಎಂಬ ನಿರ್ಣಯದ ಮೇಲೆ ಚರ್ಚೆಯಾಗುವಾಗ ಕಾಂಗ್ರೆಸ್ ಸಂಸ್ಥೆಯವರಲ್ಲಿ ಯಾರೇ ಆಗಲೀ ಅವರು ಸಂಚಾರ ಹೋಗುವುದನ್ನು ಬಿಟ್ಟು ಕಾಂಗ್ರೆಸ್ ಸಂಸ್ಥೆ ಅಥವಾ ಈಗಿನ ಸರ್ಕಾರದ ಹೆಸರನ್ನು ಉತ್ತಮಗೊಳಿಸಬಹುದು ಎಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಚುನಾವಣೆಯ ಕಾಲದಲ್ಲಿ ಮಂತ್ರಿಗಳು ಸಂಚಾರ ಮಾಡುವುದರಿಂದ ನಾಲ್ಕು ರೀತಿಯ ತೊಂದರೆಗಳು ಬರುತ್ತವೆ. ಒಂದನೆಯದು ಕಾನೂನು, ಎರಡನೆಯದು ಅಧಿಕಾರ, ಮೂರನೆಯದು ಸಾರ್ವಜನಿಕ ಹಣ, ನಾಲ್ಕನೆಯದು ಜನರಜ್ಞಾನ, ಇವುಗಳು ದುರುಪಯೋಗವಾಗುತ್ತವೆ.

ಶ್ರೀ ಬಿ. ಡಿ. ಜತ್ತಿ.— ಅದೆಲ್ಲಕ್ಕಿಂತ ಮಾನ್ಯ ಸದಸ್ಯರೇ ಹಿಂದೆ ಮಾತನಾಡಿದ್ದರೆ ಈಗ ಮಾತನಾಡುವುದಿಲ್ಲವೆಂದು ಹೇಳಬಹುದೇ!

ಶ್ರೀ ಕೆ. ಎಫ್. ಪಾಟೀಲ್.— ಅದು ಅವರ ಜ್ಞಾಪಕದ ಪ್ರಶ್ನೆಯಲ್ಲ, ಒಮ್ಮೆ ಮಾತನಾಡಿದ್ದು ಮತ್ತೊಮ್ಮೆ ಮಾತನಾಡಬಾರದು ಎಂದು ಹೇಳುವಾಗ ಆ ಪ್ರಕಾರ ರೂಲಿಂಗ್ ಕೊಟ್ಟರೆ ಈಗ ಆ ಮಾನ್ಯ ಸದಸ್ಯರೇ ಮಾತನಾಡಿದ್ದಾರೋ ಇಲ್ಲವೋ ಎಂಬ ಸಂಶಯ ಬಂದಿದೆ. ಒಟ್ಟಿನಲ್ಲಿ ಸಂಬಧಪಟ್ಟ ರಿಕಾರ್ಡನ್ನು ನೋಡಬೇಕು.

ಶ್ರೀ ಬಿ. ಎಸ್. ಶಂಕರಪ್ಪ.—ಮುಖ್ಯವಾಗಿ ಮಂತ್ರಿಗಳು ಸಂಚಾರ ಮಾಡುತ್ತಾರಂತೆ ಎಂದು ತಾಲ್ಲೂಕಿಗಾಗಲೀ ಅಥವಾ ಜಿಲ್ಲೆಗಾಗಲೀ ಮಾಹಿತಿ ಬಂದರೆ ಸಾಕು. ಅಲ್ಲಿರುವ ಅಧಿಕಾರಿಗಳು ಭಯಪಡುತ್ತಾರೆ. ಮಂತ್ರಿಗಳು ಸಂಚಾರ ಮಾಡತಕ್ಕ ಕಾಲದಲ್ಲಿ ಮಾತ್ರ ಆ ಸ್ಥಳಕ್ಕೆ ಅಲ್ಲಿನ ಅಧಿಕಾರಿಗಳು ಬರುತ್ತಾರೆ. ಇವರು ಚುನಾವಣೆಯ ಸಮಯದಲ್ಲಿ ಅಲ್ಲಿನ ಅಧಿಕಾರಿಗಳು ಬೆಂಬಲ ಸಿಕುತ್ತದೆಂಬ ಉದ್ದೇಶದಿಂದ ಸಂಚಾರ ಮಾಡುತ್ತಿದ್ದಾರೆಯೇ ಹೊರತು ಮತ್ತೇನು ಬೇರೆ ಇಲ್ಲ. ಇನ್ನು ಬೇರೆ ಯಾವ ಸಂದರ್ಭದಲ್ಲಾದರೂ ಇವರು ಸಂಚಾರ ಮಾಡಿದರೆ ಆ ಪ್ರಶ್ನೆ ಈ ಸಭೆಯಲ್ಲಿ ಮಾತನಾಡುವುದಿಲ್ಲ. ಹಿಂದೆ 1957ರಲ್ಲಿ ಚುನಾವಣೆಯಾದಗ ಆಗಲೂ ಇದೇ ರೀತಿ ಮಂತ್ರಿಗಳು ಸಂಚಾರ ಮಾಡುವ ಕಾಲದಲ್ಲಿ ನನ್ನ ಕ್ಷೇತ್ರದಲ್ಲಿಯೇ ಈ ಬಗ್ಗೆ ಸರ್ಕಾರದವರ ಮೇಲೆ ಎಲೆಕ್ಷನ್ ಕಮಿಷನ್ನಿನವರಿಗೆ ದೂರು ಕೊಟ್ಟು ವಿಶೇಷ ಗಲಾಟೆಯಾಗಿದೆ. ಈ ರೀತಿ ಸಂಚಾರ ಮಾಡತಕ್ಕ ಕಾಲದಲ್ಲಿ ಜಿಲ್ಲಾಧಿಕಾರಿಗಳು, ದೊಡ್ಡದೊಡ್ಡ ಅಧಿಕಾರಿಗಳು ಮಂತ್ರಿಗಳ ಜೊತೆಯಲ್ಲಿ ಕ್ಯಾಂಪ್ ಮಾಡುತ್ತಾರೆ. ಮುಖ್ಯ ಮಂತ್ರಿಗಳು ಬಂದ ಕಾಲದಲ್ಲಿ ಡೆಪ್ಯುಟಿ ಕಮಿಷನರು ಜೊತೆಯಲ್ಲಿರುತ್ತಾರೆ. ಈ ಪ್ರಕಾರ ಅಧಿಕಾರಿಗಳು ಮಂತ್ರಿಗಳ ಜೊತೆಯಲ್ಲಿ ಸಂಚಾರ ಮಾಡುವ ದೆಸೆಯಿಂದ ತಿಳುವಳಿಕೆ ಇಲ್ಲದ ಜನರು ಅಧಿಕಾರಿಗಳ ಪ್ರೇರೇಪಣೆಯಿಂದ ಅವರು ಯಾರಿಗೆ ಹೇಳುತ್ತಾರೋ ಅಂತಹವರಿಗೇ ಓಟು ಕೊಡಬೇಕು ಎಂಬ ಮೂಢ ಭಾವನೆಯನ್ನು ಹೊಂದಿರುತ್ತಾರೆ. ತನ್ಮೂಲಕ ಜನರ ಅಜ್ಞಾನ ಹೆಚ್ಚುತ್ತದೆ. ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ತಾವೇ ಅಧಿಕಾರದಲ್ಲಿರಬೇಕೆಂಬ ದುರಾಶೆ ಮತ್ತಷ್ಟು ಹೆಚ್ಚುತ್ತದೆ. ಆದ್ದರಿಂದ ಮಂತ್ರಿಗಳು ಚುನಾವಣೆಯ ಕಾಲದಲ್ಲಿ ಸಂಚಾರ ಮಾಡುವುದನ್ನು ಬಿಟ್ಟರೆ ಅದರಿಂದೇನು ತಪ್ಪಾಗುತ್ತದೆ? ಚುನಾವಣೆಯಾಗುವುದಕ್ಕೆ ಮುಂಚೆಯೇ ಕೆಲವು ತಿಂಗಳುಗಳ ಕಾಲ ಸಂಚಾರ ಮಾಡದಿದ್ದರೆ ಅದನಿಂದೇನು ಲುಕ್ಸಾನು ಆಗುತ್ತದೆಂಬುದನ್ನು ಮಂತ್ರಿಗಳು ಯಾರೂ ಹೇಳಲಿಲ್ಲ. ಒಟ್ಟಿನಲ್ಲಿ ಚುನಾವಣೆಗೆ ಮುಂಚೆ ಕೆಲವು ತಿಂಗಳುಗಳ ಕಾಲ ಸಂಚಾರ ಮಾಡುವುದನ್ನು ಬಿಟ್ಟು ತಮ್ಮ ಕಾಂಗ್ರೆಸ್ ಸಂಸ್ಥೆಯ ಹೆಸರನ್ನು ಉಳಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಮಾನ್ಯ ಸಭಾಪತಿಗಳೇ, ಮನುಷ್ಯನ ಸ್ವಭಾವ ಅಧಿಕಾರದಲ್ಲಿರುವಾಗ ಅದರಲ್ಲೂ ಸಂಚಾರ ಮಾಡುವಾಗ ಎಷ್ಟೋ ಸಾರಿ ತಪ್ಪುದಾರಿಗೆ ಅವನನ್ನು ಎಳೆಯುತ್ತದೆ. ಅದು ನಮ್ಮ ದೇಶದಲ್ಲಿ ಜಾಸ್ತಿಯೆಂದು ಹೇಳಿದರೆ ಖಂಡಿತ ತಪ್ಪಾಗಲಾರದು. ಹಿಂದಿನ ಅನುಭವಗಳನ್ನು ನೋಡಿದರೆ ಸಾಕಷ್ಟು ಇದಕ್ಕೆ ನಿದರ್ಶನಗಳು ಇದೆಯೆಂದು ನಾನು ಹೇಳುತ್ತೇನೆ. ನನ್ನ ಮಾನ್ಯ ಮಿತ್ರರಾದ ಶ್ರೀ ವಾರ್ಲ ಕೊತಾವಳೆಯವರು ಅಮೇರಿಕಾದಲ್ಲಿ ಹೀಗಿದೆ, ಇಂಗ್ಲೆಂಡ್‌ನಲ್ಲಿ ಹೀಗಿದೆ, ಅಲ್ಲಿ ಹೀಗಿದೆ, ಇಲ್ಲಿ ಹಾಗಿದೆ ಎಂಬುದಾಗಿ ನಾನಾ ರೀತಿಯಾಗಿ ಹೇಳಿದರು. ಹಿಂದೆ ಯಾವಾಗಲೋ ಒಂದು ಸಂದರ್ಭದಲ್ಲಿ ಇಂಗ್ಲೆಂಡಿನ ಮಂತ್ರಿಗಳು ಬೊಕ್ಕಸದಿಂದ ಚುನಾವಣೆಯ ಕಾಲದಲ್ಲಿ ಸರ್ಕಾರದ ಅಧಿಕಾರಿಗಳ ಮತ್ತು ಸರ್ಕಾರದವರ ಟಿ. ಎ. ಡ್ರಾ ಮಾಡಿದಾಗ ಹಣವನ್ನು ತೆಗೆದುಕೊಂಡಿದ್ದರಿಂದ ಆಡಿಟ್ ಅಬ್‌ಜಕ್ಷನ್ ಬಂತು. ಆ ಸಂದರ್ಭದಲ್ಲಿ ಹಣವನ್ನು ಕೊಡಿಸುವ ಸಂದರ್ಭ ಬಂದಿದೆ. ಆಗ ಜನರಲ್ ಸ್ಟೀಲ್‌ವೆಲ್ ಎಂಬುವರು ಕೋಲ್ ಅಂಡ್ ಫ್ಯುಯಲ್ ಮಂತ್ರಿಗಳು. ಅವರು ಈ ವಿಷಯದಲ್ಲಿ ಇನ್‌ಸ್ಪೆಕ್ಷನ್‌ಗೆ ಹೋದಾಗ ಅಲ್ಲಿನ ವಿರೋಧ ಪಕ್ಷದವರು ಚುನಾವಣೆಗೆ ಮುಂಚೆಯೇ ಅವರು ಆ ರೀತಿ ತೆಗೆದು ಕೊಂಡಿದ್ದ ಹಣವನ್ನು ತಮ್ಮ ಸ್ವಂತ ಹಣದಿಂದ ಕೊಡಿಸಿದರು.

ಇದನ್ನು ನೋಡಿದರೆ ನಮ್ಮ ದೇಶದ ನಾಯಕರು ಇತರ ದೇಶಗಳ ಉದಾಹರಣೆಗಳನ್ನು ತೆಗೆದುಕೊಳ್ಳುವಾಗ, ಇಂಥ ಒಂದು ಸಂದರ್ಭ, ನಿದರ್ಶನ ಅವರ ಮನಸ್ಸಿಗೆ ಬರುತ್ತದೆಯೋ ಇಲ್ಲವೇ ಗೊತ್ತಿಲ್ಲ. ಕಳೆದ ವರ್ಷ ನಮ್ಮ ಮಾನ್ಯ ಸ್ಥಳೀಯ ಸಂಸ್ಥೆಗಳ ಸಚಿವರು ತಿಮ್ಮನಹಳ್ಳಿ ಎಂಬ ಒಂದು ಕಡೆ ಆಸ್ಪತ್ರೆ ಆರಂಭೋತ್ಸವಕ್ಕಾಗಿ ಬಂದರು. ಅವರು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಬಂದಾಗ, ಅವರ ಪ್ರೋಗ್ರಾಂನಲ್ಲಿ ಆಸ್ಪತ್ರೆ ಆರಂಭೋತ್ಸವ ಎಂದಿತ್ತು; ಆ ಉತ್ಸವದ ಆಹ್ವಾನ ಪತ್ರಿಕೆ ನನಗೂ ಬಂದಿತ್ತು. ಆಸ್ಪತ್ರೆ ಎಲ್ಲಿ ಕಟ್ಟಲಿದೆಯೋ ಅಲ್ಲಿ ಆರಂಭೋತ್ಸವಕ್ಕೆ ಪ್ರತ್ಯೇಕವಾಗಿ ಹಾಕಿದ್ದ ಚಪ್ಪರದಲ್ಲಿ ಆ ಕಾರ್ಯಕ್ರಮ ನಡೆಯಲಿಲ್ಲ. ಹೋಬಳಿ ಮಂಡಲಿ ಕಾಂಗ್ರೆಸ್ ಸಮಿತಿಯವರು ಹಾಕಿದ್ದ ಚಪ್ಪರದಲ್ಲಿ ಸಮಿತಿ ವಾರ್ಷಿಕೋತ್ಸವ ಮತ್ತು ಆಸ್ಪತ್ರೆ ಆರಂಭೋತ್ಸವ ಎರಡೂ ನಡೆಯಿತು. ಆದ್ದರಿಂದ ಆಗ ಮಾಡೆಲ್ ಕಾಂಗ್ರೆಸ್ ಸಮಿತಿಯ ಒಂದು ವಾರ್ಷಿಕೋತ್ಸವ ನಡೆಯಿತೇ ವಿನಃ ಆಸ್ಪತ್ರೆ ಆರಂಭೋತ್ಸವ ನಡೆಯಲಿಲ್ಲ. ಆಸ್ಪತ್ರೆ ಫೌಂಡೇಶನ್ ಸ್ಟೋನನ್ನು ಎಲ್ಲಿಂದಲೋ ಹಾಕಿ ವಾಪಸ್ಸು ಬಂದರೂ ಹಾಗೆಯೇ ಚನ್ನಬಸಪ್ಪನವರೂ ಹುಳಿಯಾರು ಹೋಬಳಿಗೆ ಬಂದಾಗ, ಅಲ್ಲಿ ಕೂಡ ಆ ಮಂಡಲ ಕಾಂಗ್ರೆಸ್ ಸಮಿತಿ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು. ನಮ್ಮ ದೇಶದಲ್ಲಿ ಪ್ರಜಾ ಪ್ರಭುತ್ವ ಒಂದು ಭವ್ಯ ವಸ್ತೆಯಲ್ಲಿರುವ ಹಾಗೆ, ನಮ್ಮ ಮಂತ್ರಿಗಳ ತಿಳುವಳಿಕೆ ಕೂಡ ಅಷ್ಟೇ ಭವ್ಯ ವಸ್ತೆಯಲ್ಲಿದೆಯೆಂದು ಹೇಳಿದರೆ ತಪ್ಪಾಗಲಾರದು. ಮಂತ್ರಿಗಳು ಟೂರ್ ಮಾಡುವಾಗ ಎಲೆಕ್ಷನ್ ಸಂಬಂಧದಲ್ಲಿ ಹೋಗುವುದಿಲ್ಲವೆಂದು ಹೇಳುತ್ತಾರೆ. ಶ್ರೀ ತಿಪ್ಪೇರುದ್ರಯ್ಯನವರು ತುಂಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಾಗಿದ್ದಾಗ, ಚನ್ನಿಗರಾಮಯ್ಯನವರು ಮತ್ತು ಭೀಮಪ್ಪನಾಯಕರು ಇನ್‌ಸ್ಪೆಕ್ಷನ್ ಹಾಕಿಕೊಂಡು ಪೋಲಿಂಗ್ ಬೂತಿಗೆ ಬಂದರು. ತಿಪ್ಪೇರುದ್ರಯ್ಯನವರು, ''ನೀವು ಮಂತ್ರಿಗಳಾಗಿ ಬಂದಿಲ್ಲ. ನೀವು ಒಬ್ಬ ಕ್ಯಾಂಡಿಡೇಟ್ ಸ್ಥಿತಿಯಲ್ಲಿದ್ದೀರಿ. ಒಬ್ಬ ಕ್ಯಾಂಡಿಡೇಟ್‌ಗೆ ಏನು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನಿಮಗಿದೆ; ನೀವು ಈ ರೀತಿ ಚುನಾವಣೆಯಲ್ಲಿ ಪ್ರವೇಶ ಮಾಡಬಾರದು'' ಎಂದು ಖಡಾ ಖಂಡಿತವಾಗಿ ಮಂತ್ರಿಗಳಿಗೆ ಹೇಳಿದರು. ಮನುಷ್ಯನಿಗೆ ತಾನು ತನ್ನ ಪಾಲನ ಪಾರ್ಟಿ ತನ್ನ ಊರು ಎಂಬ ಅಭಿಮಾನ ಸ್ವಾಭಾವಿಕವಾಗಿರುವುದರಿಂದ, ಅದನ್ನು ಅವಕಾಶವಿದ್ದರೆ ಅಧಿಕಾರ ದುರುಪಯೋಗ ಪಡಿಸಿಯೇ ಪಡಿಸುತ್ತಾನೆ. ಈ ರೆಸಲ್ಯೂಶನ್ ಇಂಥ ಒಂದು ದುರುಪಯೋಗಕ್ಕೆ ಅವಕಾಶ ಕೊಡಬಾರದು ಮಂತ್ರಿಗಳಿಗೆ ಕೆಟ್ಟ ಹೆಸರು ಬರದಂತೆ ಉಪಕಾರ ಮಾಡಬೇಕೆಂಬ ಉದ್ದೇಶದಿಂದ ತಂದಿದೆ. ಇವತ್ತಿನ ದಿವಸ ಪಂಚಾಯಿತಿಗೆ, ತಾಲ್ಲೂಕು ಬೋರ್ಡಿಗೆ, ಅಸೆಂಬ್ಲಿಗೆ ಕಾನ್‌ಸ್ಟಿಟ್ಯುಯನ್ಸಿ ಫಿಕ್ಸ್ ಮಾಡಿರುವುದನ್ನು ನೋಡಿದ್ದರೆ, ಅದನ್ನು ಒಂದು ಪಕ್ಷ ಮನೋಭಾವದಿಂದ ಮಾಡಿದ್ದಾರೆಂದು ಹೇಳಬಹುದು. ನಮ್ಮ ಸ್ಥಳೀಯ ಸಂಸ್ಥೆಗಳ ಸಚಿವರು ಪಂಚಾಯಿತಿ ಗ್ರೂಪ್‌ಗಳನ್ನು ಮಾಡುವಾಗ ಅಥವ ತಾಲ್ಲೂಕು ಬೋರ್ಡು ಕಾನ್‌ಸ್ಟಿಟುಯನ್ಸಿಗಳನ್ನು ಮಾಡುವಾಗ ಜಿಯಾಗ್ರಫಿಕಲ್ ಕಂಟಿಗ್ಯುಯಿಟಿ, ಪಾಪ್ಯುಲೇಶನ್-ಮುಂತಾದ ಅಂಶಗಳಿರಬೇಕೆಂದು ಹೇಳಿದರು. ಆದರೆ ಆ ಅಂಶಗಳೊಂದನ್ನೂ ಗಮನಿಸದೆ ತಮ್ಮ ಪಾರ್ಟಿಯವರು ಯಾವ ರೀತಿ ಹೇಳಿದರೋ ಆ ರೀತಿ ಕಾನ್‌ಸ್ಟಿಟ್ಯುಯನ್ಸಿ ಗಳನ್ನು ಮಾಡಿದರು. ಜಿಯಾಗ್ರಫಿಕಲ್ ಕಂಟಿಗ್ಯುಟಿ ಇಲ್ಲದೆ ಇರುವ ಅನೇಕ ಪಂಚಾಯಿತಿ ಗ್ರೂಪ್ ಗಳನ್ನು ಮಾಡಿದ್ದಾರೆ. ಒಂದೇ ಗ್ರೂಪಿನಲ್ಲಿರುವ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ, ಇನ್ನೊಂದು ಗ್ರೂಪಿನಲ್ಲಿರುವ ಹಳ್ಳಿಯ ಮೂಲಕ ಹೋಗಬೇಕು. ಈ ತರಹ ಒಂದು ತಾಲ್ಲೂಕಿನಲ್ಲಿ ಗ್ರೂಪಿಂಗ್ ನಡೆದಿದೆ. ಇಂಥ ಇನ್ನೂ ಕೆಲವು ನಿದರ್ಶನಗಳನ್ನು ಕೊಡಬಲ್ಲೆ. ಈಗ ಕೆಲವು ದಿವಸಗಳ ಹಿಂದೆ ಆಡಳಿತ ಪಕ್ಷ ತಮ್ಮ ಪಕ್ಷದ ಮೀಟಿಂಗಿನಲ್ಲಿ ಮುಂದಿನ ಎಲೆಕ್ಷನ್ನಿಗೆ 20 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ನಿರ್ಧರಿಸಿದ್ದಾರೆಂದು ಪತ್ರಿಕೆಯಲ್ಲಿ ಕೊಟ್ಟಿದೆ. ಇದು ನಿಜವಾದ ಪಕ್ಷದಲ್ಲಿ, ಇದೊಂದನ್ನೇ ಯೋಚನೆ ಮಾಡಿ: ಎಲೆಕ್ಷನ್ ರೂಲ್ಸ್ ಪ್ರಕಾರ ಒಬ್ಬ ಕ್ಯಾಂಡಿಡೇಟ್ ಎಲೆಕ್ಷನ್ನಿಗೆ ಆರು ಸಾವಿರ ರೂಪಾಯಿಗಿಂತ ಜಾಸ್ತಿ ಖರ್ಚು ಮಾಡಬಾರದು. ಈ ಸಭೆಯಲ್ಲಿ 208 ಜನ ಸದಸ್ಯರಿದ್ದಾರೆ; ಇಷ್ಟು ಸದಸ್ಯರೂ ಒಬ್ಬೊಬ್ಬರೂ ಆರು ಸಾವಿರ ರೂಪಾಯಿ ನಂತೆ ಖರ್ಚು ಮಾಡಿದರೆ 20 ಲಕ್ಷ ರೂಪಾಯಿಗೆ ಬರುತ್ತದೆಯೇ. ಅಷ್ಟು ಭಾರಿ ಹಣವನ್ನು

ಖರ್ಚು ಮಾಡಿದರೆ, ಮತ್ತೆ ಅಧಿಕಾರಕ್ಕೆ ಬಂದು ಅಧಿಕಾರ ಚಲಾಯಿಸಬಹುದು, ಅಷ್ಟೆ. ಸರ್ಕಾರದ ಪಕ್ಷ ಈ ಪ್ರೋಗ್ರಾಂ ಹಾಕಿಕೊಂಡು 20 ಲಕ್ಷ ರೂಪಾಯಿ ವಸೂಲು ಮಾಡಿದ ಪಕ್ಷದಲ್ಲಿ, ಪ್ರತಿಯೊಬ್ಬ ಮಿನಿಸ್ಟರಿಗೂ 6 ಸಾವಿರ ರೂಪಾಯಿಗಿಂತ ಜಾಸ್ತಿ ಖರ್ಚು ಬೀಳುತ್ತದೆ. ಕಾಂಗ್ರೆಸ್ ಪಾರ್ಟಿಯಲ್ಲಿ ಇದ ತೀರ್ಮಾನಕ್ಕೆ ಪ್ರಾಶಸ್ತ್ಯ ಕೊಟ್ಟರೆ, ಎಲೆಕ್ಷನ್ ನಿಯಮವನ್ನು ಉಲ್ಲಂಘಿಸಿದಂತಾಗುತ್ತದೆ. ಇವತ್ತಿನ ದಿವಸ ಅಮೇರಿಕಾ ದೇಶದಲ್ಲಿ ಕೆನೆಡಿ ಅಧಿಕಾರಕ್ಕೆ ಬಂದರೆ ಅವರು ತಾವು ಕೇವಲ ಒಂದು ಪಕ್ಷದ ಯಜಮಾನನಲ್ಲ, ಇಡೀ ಅಮೇರಿಕಾ ದೇಶದ ಪ್ರಜಾಪ್ರಭುತ್ವದ ಅಧ್ಯಕ್ಷ ಎಂದು ಹೇಳುತ್ತಾರೆ. ಹಾಗೆಯೇ ನಮ್ಮ ಸರ್ಕಾರ ಇರುವುದು ಇಡೀ ಮೈಸೂರಿನ ಜನರಿಗೆ ಮತ್ತು ಪ್ರಜಾಪ್ರಭುತ್ವಕ್ಕೆ ಸಂಭಧಪಟ್ಟದ್ದು. ಆದರೆ ಈ ಅಸೆಂಬ್ಲಿಯಲ್ಲಿ ಮತ್ತು ದಿನಚರಿ ಆಡಳಿತದಲ್ಲಿ ಆಗುವುದನ್ನು ನೋಡಿದರೆ, ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೋ ಎನಿಸುತ್ತದೆ. ಸರ್ಕಾರದ ಪಾಲಿಸಿಯಿಂದ ಪ್ರತಿ ಸಾರ್ವಜನಿಕ ಪ್ರಜೆಗೂ ಉಪಕಾರವಾಗಬೇಕು. ಹಾಗೆ ಇಲ್ಲದೆ, ನಿಮ್ಮ ಪಕ್ಷವನ್ನು ಬೆಳೆಸುವ ಅನೇಕ ಕೆಲಸಗಳನ್ನು ಮಾಡುತ್ತಾ ಇದ್ದೀರಿ. ಉದಾಹರಣೆ ಕೊಡುತ್ತೇನೆ. ಮಾನ್ಯ ಚನ್ನಿಗರಾಮಯ್ಯನವರು ಮಂತ್ರಿಗಳಾಗಿದ್ದಾಗ ನಮ್ಮ ಊರಿನ ಒಂದು ಜಮೀನಿನ ಅಕ್ವಿಸಿಷನ್ ವಿಚಾರದಲ್ಲಿ ಡಿವಿಜನಲ್ ಕಮೀಷನರಲ್ಲಿ ಅಪೀಲು ಆಯಿತು. ಆಮೇಲೆ ಮಂತ್ರಿಗಳ ಕೋರ್ಟಿನಲ್ಲಿಯೂ ಅಪೀಲು ಆಯಿತು. ಕೋರ್ಟುಗಳಲ್ಲಿ ಎರಡು ಕಡೆಯವರೂ ವಾದ ಮಾಡಿದರು. ಜಮೀನನ್ನು ಮುನಿಸಿಪಾಲಿಟಿಯವರು ಆಕ್ವಯರ್ ಮಾಡಿಕೊಳ್ಳಬೇಕೆಂದು ಜಡ್ಜ್‌ಮೆಂಟ್ ಬರೆದಿದ್ದಾರೆ. ಅಂಥ ಜಮೀನಿನ ವಿಚಾರದಲ್ಲಿ ಕ್ರಮ ಜರುಗಿಸಬೇಕಾಗಿಲ್ಲವೆಂದು ಇನ್ನೊಬ್ಬ ಮಂತ್ರಿಗಳು ಆರ್ಡರ್ ಕೊಟ್ಟಿದ್ದ ಪಕ್ಷದಲ್ಲಿ ಇವರ ಪಕ್ಷ ಬೆಳೆಸುವುದಕ್ಕೆ ಮಾಡಿದ್ದು ಒಂದು ವ್ಯಕ್ತಿಗೆ ಸಹಾಯ ಮಾಡುವುದಕ್ಕೆ ಮಾಡಿರುವುದು ಎಂದು ಹೇಳುವುದರಲ್ಲಿ ಏನು ತಪ್ಪು?

Sri T. SUBRAMANYA.—I protest. This is the second time that my friend is making this a'legation.

Sri G. VENKATAI GOWDA.—Do you mean to say that he did something against the judgment of the High Court.

Sri C. K. RAJAIAH SHETTY.—It is not High Court decision. It is some subordinate Court's decision.

ಈ ರೀತಿ ಒಂದು ಪಕ್ಷವನ್ನು ಬೆಳೆಸುವುದು ಒಂದು ಜಾತಿಯನ್ನು ಬೆಳೆಸುವುದು, ತಮ್ಮ ಒಂದು ಸಂಸಾರವನ್ನು ಬೆಳೆಸುವುದು, ಆಡಳಿತ ಜವಾಬ್ದಾರಿಯನ್ನು ಹೊತ್ತಿರುವ ಯಾವ ಮಂತ್ರಿಗೇ ಆಗಲಿ ಲಾಯಕ್ಕಲ್ಲ. ಈ ರೆಸಲ್ಯೂಷನ್ನಿನಲ್ಲಿರುವ ಅಂಶವಾದರೂ, ಎಲೆಕ್ಷನ್ನಿಗೆ ಎರಡು ಮೂರು ತಿಂಗಳ ಮೊದಲು ತಾವು ಸಂಚಾರ ಮಾಡಬೇಡಿ ಎಂದು. ನೀವು ಎಲೆಕ್ಷನ್ ಪ್ರಾಪಗಾಂಡಾಗೆ ಸರಕಾರದ ಕಾರುಗಳನ್ನು ಹಣವನ್ನು ಉಪಯೋಗಿಸಬೇಡಿ. ಖಂಡಿತವಾಗಿಯೂ ಇದು ಸಾಧುವಾದ ರೆಸಲ್ಯೂಶನ್. ಇವತ್ತಿನ ದಿವಸ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ನ್ಯಾಯಬದ್ಧವಾಗಿ ಎಲೆಕ್ಷನ್ ಆಗಬೇಕು. ಇಂಥ ಒಂದು ಎಲೆಕ್ಷನ್ನಿನಲ್ಲಿ ಜನರು ಚುನಾಯಿತರಾಗುವ ಅವಕಾಶವಿರಲಿ ಎಂದು ಹೇಳಿದರೆ ಏನು ತಪ್ಪಿದೆ? ಮಿನಿಸ್ಟರುಗಳು ಎಲೆಕ್ಷನ್ನಿಗೆ ಎರಡು ತಿಂಗಳು ಮುಂಚೆ ಪ್ರಚಾರಕ್ಕೆ ಟೂರು ಮಾಡಕೂಡದು. ಅವರು ಎಲೆಕ್ಷನ್ ಪ್ರಚಾರಕ್ಕೆ ಹೋದಾಗ ತಮ್ಮ ಸ್ವಂತ ಕಾರಿನಲ್ಲಿಯೇ ಹೋಗಬೇಕು. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದು, ರಾಜಿನಾಮೆ ಕೊಟ್ಟು ಮನೆಗೆ ಹೋಗುವಾಗ ತಮ್ಮ ಸ್ವಂತ ಕಾರನ್ನು ತರಿಸಿಕೊಂಡು, ಅದರಲ್ಲಿ ಸೆಕ್ರೆಟರಿಯೇಟಿನಿಂದ ಮನೆಗೆ ಹೋದರಂತೆ. ಹಿಂದೆ ಯಾವ ಒಂದು ಇಂಪೀರಿಯಲಿಸ್ಟ್ ರೂಲ್ ಇತ್ತೆ, ಅಂಥ ಒಂದು ವೇಳೆಯಲ್ಲಿ ಒಬ್ಬ ಮಾರ್ಗದರ್ಶಕರಾದ ವ್ಯಕ್ತಿಯಾಗಿದ್ದರು, ರಾಜಿನಾಮೆ ಕೊಟ್ಟಮೇಲೆ ಸರ್ಕಾರದ ಕಾರನ್ನು ಉಪಯೋಗಿಸಲಿಲ್ಲ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಆ ವ್ಯಕ್ತಿಯಲ್ಲಿ ಎಷ್ಟು ಜಾಗ್ರತೆ, ನಿಷ್ಠೆ, ಸತ್ಯವಂತರಾಗಿ ಬಾಳಬೇಕೆಂಬ ಆಸಕ್ತಿ ಇತ್ತು. ಅದು ಬಿಟ್ಟು ಬಿಟ್ಟು, ಮಂತ್ರಿಗಳು ಸರ್ಕಾರಿ ಕಾರುಗಳನ್ನು ಉಪಯೋಗಿಸಿಕೊಂಡು ಯಾವ ಕ್ಷೇತ್ರಗಳಲ್ಲಿ ಪಿ. ಎಸ್. ಪಿ., ಇಂಡಿಪೆಂಡೆಂಟ್ ಮುಂತಾದ ವಿರೋಧ ಪಕ್ಷದವರು ಜಾಸ್ತಿ ಆರಿಸಿ ಬಂದಿದ್ದಾರೊ, ಅಲ್ಲಿಗೆ ಹೋಗಿ ಆಶಾದಾಯಕವಾದ ಅನೇಕ ಪ್ರಾಮಿಸುಗಳನ್ನು ಮಾಡಿ, ಕಾಂಗ್ರೆಸ್ಸಿಗೆ ಪರಿವರ್ತನೆ ಮಾಡುವ ಕೃತ್ಯ ಮಾಡಿದರೆ, ಇದು ನಿಜವಾಗಿಯೂ ಪ್ರಜಾ ಪ್ರಭುತ್ವದಲ್ಲಿ ನಾಚಿಕೆಗೇಡಿನ ಪ್ರಸಂಗ. ಸಣ್ಣ ಸಣ್ಣ ಎಲೆಕ್ಷನ್ನುಗಳಲ್ಲಿ ಈ ತರಹ ಪ್ರವೇಶ ಮಾಡಿ, ಎಲೆಕ್ಷನ್ನಿನ ಒಂದು ಪವಿತ್ರತೆಯನ್ನು ಹಾಳು ಮಾಡಿರುವಾಗ ಜನರಲ್ ಎಲೆಕ್ಷನ್ ವಿಚಾರದಲ್ಲಿ ಇದಕ್ಕಿಂತ ಮೇಜರ್ ಅಥವ ಸೂಕ್ಷ್ಮವಾದ ಠರಾವನ್ನು ಯಾರು ತರಲಾರರು. ಎಲೆಕ್ಷನ್ನಿಗೆ ಎರಡು ತಿಂಗಳ ಮುಂಚೆ ನೀವು ಪಾರ್ಟಿ ಪ್ರಚಾರಕ್ಕಾಗಿ ಸರ್ಕಾರಿ ಕಾರುಗಳಲ್ಲಿ ಪ್ರಯಾಣ ಮಾಡಬೇಡಿ. ಟೂರ್ ಪ್ರೋಗ್ರಾಂ ಹಾಕಬೇಡಿ ಎಂದು ನರಸಿಂಹನ್‌ರವರು ತಂದಿರುವ ರೆಸಲ್ಯೂಶನ್‌ಗಿಂತ ಮೇಜರ್ ರೆಸಲ್ಯೂಶನ್ ಇರಲಾರದು. ಇದು ನಮ್ಮ ಪ್ರಜಾಪ್ರಭುತ್ವವನ್ನು ಅಷ್ಟು ಸ್ವಚ್ಛವಾಗಿ ಕಾಪಾಡಿಕೊಂಡು ಬರಲು ಅನುಕೂಲವಾಗಲೆಂದು ತಂದಿರತಕ್ಕ ಒಂದು ನಿರ್ಣಯ. ಇದು ಒಂದು ಆದರ್ಶಪ್ರಾಯವಾದ ಠರಾವು, ಏನೋ ವಿರೋಧ ಪಕ್ಷದವರು ಹೇಳುತ್ತಾರೆ, ಅವರು ಈ ನಿರ್ಣಯವನ್ನು ತಂದಿದ್ದಾರೆ ಎನ್ನತಕ್ಕ ಒಂದು ತಪ್ಪು ಭಾವನೆ ಅಥವಾ ಒಂದು ತಪ್ಪು ಅಭಿಪ್ರಾಯ ತಮಗೆ ಬರಬಾರದು. ಆ ರೀತಿ ಭಾವನೆ ಮಾಡದೆ ಆಡಳಿತ ಪಕ್ಷದವರೂ ಮತ್ತು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈಗ ಶ್ರೀಮಾನ್ ಎಂ. ಸಿ. ನರಸಿಂಹನ್‌ರವರು ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ನಾನು ಸ್ವಲ್ಪ ಮಟ್ಟಿಗೆ ವಿರೋಧ ಮಾಡಬೇಕಾಗಿದೆ. ಆದರೆ ಈಗ ಅಧ್ಯಕ್ಷತೆ ವಹಿಸಿರುವ ಅಧ್ಯಕ್ಷರು ನಾನು ಹೇಳತಕ್ಕ ಕಾರಣಗಳಿಗಾಗಿ ಸಿಟ್ಟು ಮಾಡಿಕೊಳ್ಳಬಾರದು. ಅಧ್ಯಕ್ಷರಾದ ತಾವೇನೋ ಬಹಳ ಒಳ್ಳೆಯವರು. ಆದುದರಿಂದ ನಾನು ಹೇಳತಕ್ಕ ವಿಚಾರದಲ್ಲಿ ತಾವು ಅನ್ಯಥಾ ಭಾವಿಸಲಾರಿರೆಂದು ನಂಬಿದ್ದೇನೆ. ನಾನೇನೋ ಈ ನಿರ್ಣಯವನ್ನು ವಿರೋಧಿಸುತ್ತೇನೆ. ಆದರೆ ಈ ನಿರ್ಣಯದ ವಿಚಾರವಾಗಿ ಇಲ್ಲಿಯವರೆಗೂ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆ ವಿಚಾರವಾಗಿ ಹಿಂದೆ ಅಧ್ಯಕ್ಷರಾಗಿದ್ದ ಶ್ರೀ ತಿಮ್ಮಬೋವಿಯವರು ಆ ಭಾಷಣಗಳ ಬಗ್ಗೆ—ಅವು ಬಜೆಟ್ ಮೇಲೆ ಮಾಡತಕ್ಕ ಭಾಷಣಗಳಿದ್ದಂತೆ ಇವೆ ಎಂತ ಇನ್ನೂ ಏನೇನೋ ಹೇಳಿದ್ದಾರೆ. ಆದರೆ ನಾನೀಗ ಮಾತನಾಡಲು ಹೊರಟಿರುವುದೂ ಕೂಡ ಇದು ಎಷ್ಟರ ಮಟ್ಟಿಗೆ ಅಸಂಬದ್ಧವಾಗಿದೆ ವಿರೋಧವಾಗಿದೆ ಎಂಬುದು ನನಗೂ ಗೊತ್ತಿದೆ.

ಸಭಾಪತಿಯವರು.—ಮಾನ್ಯ ಸದಸ್ಯರ ಗಮನಕ್ಕೆ ನಾನೀಗ 140ನೇ ಕ್ಲಾಜಿನಲ್ಲಿ ಹೇಳಿರತಕ್ಕ ಅಂಶವನ್ನು ತರಲಿಚ್ಛಿಸುತ್ತೇನೆ.

"No speech on a resolution shall, except with the permission of the Speaker, exceed fifteen minutes in duration."

I am bringing it to the notice of the Hon'ble House.

ಶ್ರೀ ಜಿ. ಶಿವಪ್ಪ.—ಶ್ರೀಮಾನ್ ನರಸಿಂಹನ್‌ರವರು ಈ ಒಂದು ನಿರ್ಣಯವನ್ನು ತಂದಿರುವುದು ನನಗಂತೂ ತುಂಬಾ ಆಶ್ಚರ್ಯವನ್ನುಂಟು ಮಾಡಿದೆ. ಅವರು ಯಾವ ಪಕ್ಷಕ್ಕೆ ಸೇರಿದ್ದಾರೆ, ಅವರು ಯಾವ ತತ್ವಗಳಿಗೆ ಅಂಟಿಕೊಂಡಿದ್ದಾರೆ, ಅವರ ಪಕ್ಷದಲ್ಲಿ ಯಾವ ತತ್ವಗಳಿಗೆ ಎಂಬುದೆಲ್ಲ ಸ್ವಲ್ಪ ಮಟ್ಟಿಗೆ ನನಗೂ ಗೊತ್ತಿದೆ. ಇನ್ನೂ ಮೊನ್ನೆ ತಾನೆ ಆ ರಾಮಮೂರ್ತಿ ಡಾಂಗೆ ಅವರುಗಳು ನಡೆಸಿರತಕ್ಕ ನಡವಳಿಕೆಗಳ ಬಗ್ಗೆ ದೇಶಾದ್ಯಂತವೂ ಟಾಂ ಟಾಂ ಆಗಿರುತ್ತೆ. ಅಂಥಾ ಒಂದು ಪಾರ್ಟಿಗೆ ಸೇರತಕ್ಕವರು ಈ ದಿವಸ ಈ ರೆಸಲ್ಯೂಷನನ್ನು ತಂದಿದ್ದಾರೆ.

ಶ್ರೀ ಟಿ. ವೆಂಕಟೇಗೌಡ (ಪಾಳ್ಯಂ).—ಅಧ್ಯಕ್ಷರೇ ಶ್ರೀ ರಾಮಮೂರ್ತಿಯವರಾಗಲೀ ಅಥವಾ ಶ್ರೀ ಡಾಂಗೆಯವರಾಗಲೀ ಈಗ ಈ ಸಭೆಯಲ್ಲಿರುವುದಿಲ್ಲ. ಆದುದರಿಂದ ಅಂಥಾವರ ವಿಚಾರವನ್ನೀಗ ಇಲ್ಲಿ ಎತ್ತಿ ಪ್ರಸ್ತಾಪ ಮಾಡುವುದು ಸರಿಯೇ ಎಂದು ಕೇಳುತ್ತೇನೆ?

Sri T. SUBRAMANYA.—A Member could speak about municipal affairs, which has nothing to do with this resolution?

ಶ್ರೀ ಜಿ. ಶಿವಪ್ಪ.—ಶ್ರೀ ನರಸಿಂಹರವರು ಇಂಥಾ ನಿರ್ಣಯ ತಂದಿರುವುದನ್ನು ನೋಡಿ ನನಗೆ ತುಂಬಾ ಆಶ್ಚರ್ಯ ಉಂಟಾಗಿದೆ. ಆದರೆ ಶ್ರೀಮಾನ್ ನರಸಿಂಹರವರು ನನಗೆ ತುಂಬಾ ಸ್ನೇಹಿತರು. ಅವರಲ್ಲಿ ನನಗೆ ತುಂಬಾ ಗೌರವ ಭಾವನೆ ಇದೆ. ಎಲ್ಲಾ ಕಮ್ಯುನಿಸ್ಟ್ ಸದಸ್ಯರೂ ಶ್ರೀಮಾನ್ ನರಸಿಂಹರವರಂತೆಯೇ, ಇದ್ದಿದ್ದರೆ ಆಗ, ನಾನು ಇದನ್ನು ಒಪ್ಪಿ ಕೊಳ್ಳುತ್ತಿದ್ದೆನೋ ಏನೋ! ಆದರೆ ಅವರ ಪಕ್ಷದಲ್ಲಿ ಏನಿದೆ ಅನ್ನುವುದೆಲ್ಲ ನನಗೆ ಗೊತ್ತಿದೆ. ಹಾಗಿರುವಾಗ ಇವರು ಈ ರೀತಿ ಒಂದು ನಿರ್ಣಯ ತಂದಿರುವುದು ನಿಜವಾಗಿಯೂ ತುಂಬಾ ಆಶ್ಚರ್ಯ! ಆದರೆ ಅವರು ತಾವು ಒಂದು ವಿರೋಧ ಪಕ್ಷ ಎಂತ ಭಾವಿಸಿರಬಹುದು. ಆದರೆ ಆ ವಿರೋಧ ಪಕ್ಷ ಇದೆಯೋ-ಇಲ್ಲವೋ ಅದನ್ನು ನಾವಂತೂ ಲೆಕ್ಕಕ್ಕೇ ಇಟ್ಟುಕೊಂಡಿಲ್ಲ. ಏನೋ ಅದಾಗೆ ಒಂದು ಪಾರ್ಟಿ ಹುಟ್ಟಿಕೊಂಡಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅಧ್ಯಕ್ಷರೇ ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು "ವಿರೋಧಪಕ್ಷ ಇದೆಯೋ ಇಲ್ಲವೋ ಅದು ನಮಗಂತೂ ಗೊತ್ತಿಲ್ಲ." ಎಂತ ಹೇಳುವುದು ಅಸಂಬದ್ಧ ಪ್ರಲಾಪ.

. My friend Sri Sivappa should not transgress the limits of decency. I is hardlv fair that he should talk in this strain. There is a limit to humour. Let there be no aspersion.

Mr. CHAIRMAN.—Please come to the point.

ಶ್ರೀ ಜಿ. ಶಿವಪ್ಪ.—ನಾನು ಇವರೆಲ್ಲರಿಗೂ ಸಮುದ್ರದಲ್ಲಿ ವಿಮಾನು ಹಿಡಿಯಿರಿ ಎಂತ ಇಷ್ಟೇ ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷ ಬೆಳೆಯಬೇಕೆಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ನಮ್ಮ ಪಕ್ಷದಲ್ಲಿ ಅಭಿಪ್ರಾಯ ಅಳುಕಿರಬಹುದು; ಲೋಪದೋಷಗಳಿರಬಹುದು; ಇದಕ್ಕಾಗಿ ದೇಶದಲ್ಲಿ ಒಂದು ವಿರೋಧಪಕ್ಷ ಬೆಳೆಯಬೇಕಾದ್ದು ಪ್ರಜಾಪ್ರಭುತ್ವ ತತ್ವಕ್ಕೆ ಅತ್ಯಗತ್ಯವೆಂಬು ದನ್ನು ಯಾರೂ ಜರಿಯುತ್ತಿಲ್ಲ. ಹೀಗೆ ದೇಶದಲ್ಲಿ-ಶಾಸನ ಸಭೆಯಲ್ಲಿ ಒಂದು ವಿರೋಧ ಪಕ್ಷ ಬೆಳೆಯಬೇಕಾಗಿದ್ದರೆ ಈ ಹಿಂದೆ ಬೆಂಗಾಳದಲ್ಲಿ ಡೆಮಾಕ್ರಸಿ ಉಳಿಯಲು ಒಂದು ವಿರೋಧ ಪಕ್ಷ ವಿರಬೇಕೆಂದು ಹೇಳಿ ವಿರೋಧ ಪಕ್ಷದ ನಾಯಕರಿಗೆ ಸಹ 950 ರೂ.ಗಳ ಸಂಬಳ ಕೊಡ ಬೇಕೆಂದು......

Mr. CHAIRMAN.—Whatever may have been the position of the Opposition or emoluments, it is altogether a different matter. He should please confine himself to the subject at issue. There is a rule to the effect that irrelevant matter should not be allowed. I have brought it to his notice several times. He does not confine himself to the point at issue.

ಶ್ರೀ ಜಿ. ಶಿವಪ್ಪ.—ಅವರೂ ಸಹ ದೇಶದಲ್ಲಿ ಟೂರ್ ಮಾಡುವುದಕ್ಕೆ, ಅದಕ್ಕಾಗೆ ನಾನೀಗ ಏನು ಹೇಳಬೇಕೆಂದಿದ್ದೇನೆಂದರೆ ಈ ಅಸೆಂಬ್ಲಿಯಲ್ಲಿರತಕ್ಕ ನಮ್ಮ ವಿರೋಧ ಪಕ್ಷದ ನಾಯಕ ರಿಗೂ ಒಂದು ಕಾರು 950 ರೂ. ಸಂಬಳ-ಇಬ್ಬರು ಮೂವರು ಜವಾನರು ಅಷ್ಟು ಅನುಕೂಲ ಕೊಟ್ಟರೆ ಮುಂದೆ ಇದೊಂದೂ ಇರುವುದಿಲ್ಲ ಎಂತ ಹೇಳುತ್ತಿದ್ದೇನೆ.

(ಶ್ರೀ ಜಿ. ಶಿವಪ್ಪ)

(Mr. DEPUTY SPEAKER in the Chair.)

ಮಾತು ಮಾತಿಗೂ ಕೂಡ ಕಾಂಗ್ರೆಸ್ ಮಂತ್ರಿಗಳು ಟೂರ್ ಮೇಲೆ ಹೋಗುತ್ತಾರೆ ಎಂದು ಹೇಳುತ್ತೀರಿ ಈ ರೀತಿ ಸುಮ್ಮನೆ ಟೀಕೆ ಮಾಡುವುದು ಸುಲಭ ನಿಮಗೂ ಒಂದು ಅವಕಾಶ ಮಾಡಿಕೊಟ್ಟು ಮಂತ್ರಿ ಸ್ಥಾನಕ್ಕೆ ನೀವು ಬಂದಾಗ ಎಷ್ಟೆಷ್ಟು ಟೂರ್ ಮಾಡುತ್ತೀರಿ. ಏನೇನು ಟೀಕೆ ಆಗುತ್ತದೆ ಎಂಬುದನ್ನು ಅನುಭವಿಸಿ ನೋಡಲಿ ಎಂದು ಹೇಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ನಿಮ್ಮ ಸರ್ಕಾರದ ಮಂತ್ರಿಗಳು ಹಲವು ಸಾರಿ ಟೂರ್ ಹೋಗಿ ಟಿ. ಎ. ತೆಗೆದು ಕೊಂಡು ನೂರಾರು ಭಾಷಣ ಮಾಡಿದ್ದು ನಮಗೆಲ್ಲಾ ತಿಳಿದು ಬಂದಿದೆ. ನೀವು ಹೇಳುವ ಬದಲಾವಣೆ ಯಾವಾಗ ಮಾಡುವಿರಿ ಹೇಳಿ ಆಮೇಲೆ ನೋಡಿ.

ಶ್ರೀ ಜಿ. ಶಿವಪ್ಪ.—ತಾವು ಬಂದರೆ ಒಳ್ಳೆಯದಾಗುತ್ತದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ ಅವರಿಗೂ ಒಂದು ಕಾರು ತಿಂಗಳಿಗೆ 750 ರೂ. ಸಂಬಳ ಕೊಟ್ಟರೆ ಆಡಳಿತ efficient ಆಗುತ್ತದೆಂದು ಹೇಳುತ್ತೇನೆ. ಈ ಮಂತ್ರಿಗಳು ಮೂರು ನಾಲ್ಕು ಸಾವಿರ ರೂಪಾಯಿ ಟಿ. ಎ. ತೆಗೆದುಕೊಂಡರೆ ವಿರೋಧಿ ಪಕ್ಷದವರು ಎಷ್ಟೋ ಟಿ. ಎ. ತೆಗೆದು ಕೊಳ್ಳುತ್ತಾರೆ ಯಾವುದು official duty ಇರುವುದಿಲ್ಲ ನೋಡೋಣ. ಏನಾದರೂ ಮಾಡಿ ಕಾಂಗ್ರೆಸ್ ಮಂತ್ರಿಗಳನ್ನು ಹೊರಗೆ ಕಳಿಸಬೇಕೆಂದು ಈ ರೀತಿ ಹೇಳುತ್ತಿದ್ದಾರೆ. ಯಾರಿಗೆ ಜನ ಬೆಂಬಲವಿದೆ ಎಂಬುದನ್ನು ಆಲೋಚನೆ ಮಾಡಿ ನೋಡಬೇಕು ಶ್ರೀಮಾನ್ ರಾಜಯ್ಯ ಶೆಟ್ಟಿಯವರು ತಾಲ್ಲೂಕ್ ಬೋರ್ಡ್ ಚುನಾವಣೆಯಲ್ಲಿ ಸೋತರು. ಶ್ರೀ ನರಸಿಂಹನ್ ಅವರು ಚುನಾಯಿತರಾಗಿ ಬಂದಿದ್ದಾರೆ. ಸಂತೋಷ ಈಗ ಸಾರ್ವತ್ರಿಕ ಚುನಾವಣೆ ಹತ್ತಿರ ಬಂದಿರುವದರಿಂದ ಏನಾದರೂ ಒಂದು ಸ್ಟಂಟ್ ಮಾಡಿ ಮಾತನಾಡುತ್ತಿದ್ದಾರೆ ಇವರು ಭಾಷಣ ಮಾಡುವ ರೀತಿಯ ಬಗ್ಗೆ ಜನರಿಗೆ ಚನ್ನಾಗಿ ಗೊತ್ತಿದೆ. ಇವರ ಸ್ಟಂಟ್ ಭಾಷಣಕ್ಕೆ ಯಾರು ಮೋಸಹೋಗುವುದಿಲ್ಲ. ಅದನ್ನು ಯಾರು ನಂಬುವದಿಲ್ಲ. ಜನರು ಅವರಿಗೆ ಓಟು ಕೊಡುವದಿಲ್ಲ. ಪಕ್ಷದ ಮುಖಂಡರು ಯಾರೇ ಬರಲಿ ಏನೇ ಮಾಡಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಅವರಿಗೆ ಭಯಬಂದಿದೆ ಚುನಾವಣೆಯಲ್ಲಿ ಸೋತು ಹೋಗುತ್ತಾರೆ. ನನ್ನ ಕ್ಷೇತ್ರದಲ್ಲಿಯ ಚುನಾವಣೆಗೆ ಯಾರು ಬೇಕಾದರು ಬರಲಿ ನನಗೆ ಧೈರ್ಯವಿದೆ ಸಮುದ್ರದಲ್ಲಿ ಮೀನು ಹಿಡಿಯುವಂತಿದೆ ಯಾರಿಗೂ ಸಿಕ್ಕುವುದಿಲ್ಲ ಏನು ಪ್ರಚಾರ ಮಾಡಿದರೂ ಜನರ ಮೇಲೆ ಅದರ ಪರಿಣಾಮವಾಗುವುದಿಲ್ಲ. ವಿರೋಧಿ ಪಕ್ಷದ ಸದಸ್ಯರು ಮಾತು ಮಾತಿಗೆ ಚಾಲೆಂಜ್ ಮಾಡುತ್ತಾರೆ. ಏತಕ್ಕೆ ಮಾಡುತ್ತಾರೆ? ನಿಜವಾಗಿಯೂ ಈ ರೀತಿ ಪ್ರಮಾಣ ಮಾಡುವುದು ಚಾಲೆಂಜ್ ಮಾಡುವುದು ಒಳ್ಳೆಯದಲ್ಲ. ವಿರೋಧ ಪಕ್ಷದವರು ನಿಜದ ತಲೆಯಮೇಲೆ ಹೊಡೆಯುವಂತೆ ಅಸತ್ಯ ಹೇಳುತ್ತಾರೆ. ಶ್ರೀ ರೇವಣಸಿದ್ದಪ್ಪನವರು ತಮಾಷೆಗಾಗಿ ಹಾಗೆ ಹೇಳುತ್ತೇನೆಂದು ಅನ್ನುತ್ತಾರೆ ಆದರೆ ಇದು ತಮಾಷೆಯಲ್ಲ ಎಂಬುದು ಗೊತ್ತಾಗುತ್ತದೆ. ಸುಳ್ಳು ಯಾವುದು ನಿಜ ಯಾವುದು ಎಂಬುದು ಜನಕ್ಕೆ ಬೇಗನೇ ಗೊತ್ತು ಆಗುತ್ತದೆ ವ್ಯರ್ಥವಾಗಿ ಬಾಯಿ ಇದೆಯೆಂದು ಲೌಡ್‌ಸ್ಪೀಕರ್ ಹಾಗೆ ಕೂಗಿದರೆ ಏನು ಪ್ರಯೋಜನ ಇದೆಲ್ಲವೂ ಚುನಾವಣೆಯ ಸ್ಟಂಟ್ ಆಗಿದೆ ಇಷ್ಟು ದಿವಸವಾದರೂ ಸಹ ಇನ್ನೂ ಅವರು ಪಾಠ ಕಲಿತಿಲ್ಲ ಆದರೆ ಇನ್ನು ಸ್ವಲ್ಪ ದಿನಗಳಲ್ಲಿ ಸರಿಯಾದ ಪಾಠ ಕಲಿಯುತ್ತಾರೆ.

ಇನ್ನು ಕೊನೆಯದಾಗಿ ಒಂದೇ ಒಂದು ಗಣನೀಯವಾದ ಉದಾಹರಣೆ ಕೊಟ್ಟು ನನ್ನ ಮಾತನ್ನು ಮುಗಿಸಲು ಇಚ್ಛೆಪಡುತ್ತೇನೆ. ಮೊನ್ನೆ ತಾನೇ, ಅಮೇರಿಕಾ ದೇಶದಲ್ಲಿ ಸಾರ್ವತ್ರಿಕ ಚುನಾವಣೆ ಆಯಿತು. ಆಗ್ಗೆ ಅಲ್ಲಿಯ ಅಧ್ಯಕ್ಷರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲಿಲ್ಲ. ಇದನ್ನು ಅವಶ್ಯವಾಗಿ ಗಮನಿಸತಕ್ಕಂಥಾದ್ದು ಆದುದರಿಂದ ಮಾನ್ಯ ಸದಸ್ಯರು ಈ ಸಭೆಯಲ್ಲಿ ಈಗ ಈ ರೀತಿ ನಿರ್ಣಯ ತರದಿದ್ದು ಸರಿಯಲ್ಲ ಎಂದು ಹೇಳುತ್ತೇನೆ. ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧ ಮಾಡಲು ಇಚ್ಛಿಸುತ್ತೇನೆ ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

† Sri T. SUBRAMANYA.—Sir, I was allowed by the previous Speaker to intervene for a few minutes.

Sri G. VENKATAI GOWDA.—May I know if there is a provision for intervention in the rules.

Sri T. SUBRAMANYA.—I am entitled to speak by way of intervention to explain a point raised by Hon'ble Sri Rajaiah Shetty. It is about this ; a land acquisition case. He referred to a land acquisition taken long back. He referred to Hon'ble Sri Chennigaramaiah. It is true. The land acquisition was ordered and it went up before the civil court. Two courts continuously held that the proceedings were invalid. Then it came before the Government for filing an appeal. The Government did not permit the appeal to be filed. It was only an advice to be given to a society. It was on this ground : If any member has the patience to go through the Land Acquisition Act, it would be clear that acquisition of land should be for a purpose. According to the resolution passed by the Municipality this was in order to increase the resources of the municipality we want to acquire this land and sell it away at a higher price. The court said that it is not a public purpose to increase your income. You cannot acquire others' properties and sell it at a higher price. And then, not only that, not only did the resolution say so, even the notification said so. Therefore, both the courts held that it was not a public purpose. It came before the Government for examination. The Law department thoroughly examined it and I have concurred with the Law Department's opinion that it is not a fit case for appeal.

Sri C. K. RAJAIAH SHETTY.—I protest against this statement and I would challenge it. Two courts did not......

Sri K. S. SURYANARAYANA RAO.—Is this allowed, Sir.

Mr. DEPUTY SPEAKER.—No. It is not allowed.

Sri C. K. RAJAIAH SHETTY.—Let the Minister speak the truth, if he dares to.

Sri T. SUBRAMANYA.—Sir, truth is not the monopoly of Rajaiah Shetty.

Mr. DEPUTY SPEAKEB.—We have only 15 minutes left for this resolution. Let the Minister reply first.

† ಶ್ರೀ ಬಿ. ಡಿ. ಜತ್ತಿ.—ಸಭಾಪತಿಗಳೇ, ಈ ಸಲ ಮತ್ತು ಹೋದ ಸಲ ಈ ಗೊತ್ತುವಳಿಯ ಬಗ್ಗೆ ಚರ್ಚೆ ನಡೆದಿದೆ. ಇದುವರೆಗೂ ಅನೇಕ ಸದಸ್ಯರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಚರ್ಚೆ ಮಾಡಿದ ಕಾಲಕ್ಕೆ ಕಾಂಗ್ರೆಸ್‌ನವರು ಮತ್ತು ಕಾಂಗ್ರೆಸ್ ಸರಕಾರದವರು ಮುಂದೆ ಸಾರ್ವತ್ರಿಕ ಚುನಾವಣೆಗಳು ಬರುತ್ತಿವೆ ಎಂದು ತಿಳಿದುಕೊಂಡು ಏನೋ ಪ್ರಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ಹೇಳಿದರು. ವಿರೋಧ ಪಕ್ಷದವರು ಮಾತನಾಡುವ ಧಾಟಿಯನ್ನು ನೋಡಿದರೆ ಚುನಾವಣೆಗಳು ಬೇಗನೆ ಬರುತ್ತಿರುವುದರಿಂದ ಏನಾದರೂ ಮಾಡಿ ಕಾಂಗ್ರೆಸ್ ಪಕ್ಷವನ್ನು ವಿರೋಧ ಮಾಡದೆ ಇದ್ದರೆ ಮುಂದೆ ನಮಗೆ ಬೆಲೆ ಸಿಕ್ಕುವುದಿಲ್ಲವೆಂದು, ದಪ್ಪ ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಈ ವಿಷಯ ಬರಲಿಕ್ಕೆ ಈ ಹೊತ್ತು ಪ್ರಯತ್ನ ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ವೈ. ವೀರಪ್ಪ.—ನಿಮ್ಮ ಭಾಷಣದ ಮಟ್ಟ ಹಾಗಿರಬಾರದು. ಆ ರೀತಿ ಇರುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಮಟ್ಟದ ನಿರ್ಣಯ ಮಾಡುವವರು ತಾವಲ್ಲ, ಚುನಾವಣೆಗಳ ಕಾಲಕ್ಕೆ ಜನ ನಿರ್ಣಯ ಮಾಡುತ್ತಾರೆ.

ಮಾನ್ಯ ಸದಸ್ಯರು ಮಾತನಾಡಿದ ಕಾಲಕ್ಕೆ ರಾಜ್ಯಾಂಗದ ಹೆಸರನ್ನು ಹೇಳಿದರು. ಯಾವ ಆರ್ಟಿಕಲ್ ಪ್ರಕಾರ ಎಂಬುದನ್ನು ತೋರಿಸಿ ಎಂದರೆ ತೋರಿಸುವುದಕ್ಕಾಗುವುದಿಲ್ಲವೆಂದರೆ ಹೇಗೆ? When we make a mention of the constitution, we must be in a position to point out the Articles.

Sri Y. VEERAPPA.—It is an established moral convention.

Sri B. D. JATTI.—We are not here to follow the moral code of Sri Veerappa's convention. We are here to follow the legal code. ಮಾರಲ್ ಕೋಡ್ ವಿಷಯ ಸ್ವಾಮಿಗಳು ಹೇಳಬೇಕು ಮಠದಲ್ಲಿ ಹೇಳಬೇಕು. ಈ ರೀತಿ ಯಾವುದಾದರೂ ಹೇಳುವ ಕಾಲಕ್ಕೆ ಎಲ್ಲಿ ಯಾವ ಪ್ರಾವಿಷನ್ಸ್ ಇದೆಯೆಂದು ಹೇಳಬೇಕು. R presentation of peoples Act ಪ್ರಕಾರ ಅನೇಕ ರೀತಿಯ ಪ್ರಾವಿಸೋ ಇದೆ. ಅದರೊಳಗೆ ಮಂತ್ರಿಗಳಾದವರು ಮುಖ್ಯ ಮಂತ್ರಿಯಾದವರು ಉಪಮಂತ್ರಿಯಾದವರು ಪ್ರಚಾರ ಮಾಡಬಾರದೆಂದು ಹೇಳಿಲ್ಲ. Election offences ಮಾಡಬಾರದು ಎಂದು ಮಾತ್ರ 126 ರಿಂದ 130ನೇ ಸೆಕ್ಷನ್‌ಗಳಲ್ಲಿ ಹೇಳಿದ್ದಾರೆ. ಇದರೊಳಗೆ ಏನಾದರೂ ತಪ್ಪು ಮಾಡಿದ್ದರೆ, ಅವರು ಯಾರೇ ಆಗಲೀ ಎಲ್ಲರೂ ತಪ್ಪಿತಸ್ಥರಾಗು ತ್ತಾರೆ. ಅದರ ಪ್ರಕಾರ ಚುನಾವಣೆ ರದ್ದಾಗಬೇಕು. ಆ ಪ್ರಶ್ನೆ ಬೇರೆ, ನಮ್ಮನ್ನ ಇನ್ನೊಬ್ಬರು ಪ್ರಚಾರ ಮಾಡುತ್ತಾರೆಂದು ಹೇಳುವುದು ಸರಿಯಲ್ಲ.

ಯಾವುದೇ ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ ದೇಶಗಳಲ್ಲಿ, ಮಂತ್ರಿಗಳಾದವರು ಚುನಾವಣೆಗೆ ಮೊದಲು ಎರಡು ತಿಂಗಳ ಕಾಲ ಪ್ರಚಾರ ಮಾಡಬಾರದೆಂದು ಹೇಳಿಲ್ಲ. ಇಂಗ್ಲೆಂಡಿನ ವಿಷಯ ವನ್ನು ಅನೇಕ ಜನ ಹೇಳುತ್ತಿದ್ದರು. ನಾನು ಅಲ್ಲಿಯ ವಿಚಾರವೇನೆಂದು ತರಿಸಿ ನೋಡಿದೆ. ಅದನ್ನು ಈಗ ಓದುತ್ತೇನೆ.

> "I may add that in England canvassing on behalf of the party by the Prime Minister is considered to be not only permissible but a duty cast on him. In 'Cabinet Government' by Sir Ivor Jenings, the learned author has stated on page 202: Today it is not only part of the Prime Minister's duty to his party to set out his policy in his election manifesto and to speak to vast concourses at party meetings, it is his duty also to end a letter in support of his candidate at every bye-election and at a General Election to speak to the electorate through the broadcasting system."

Sri G. N. PUTTANNA.—Through the broadcasting system. That is significant.

ಶ್ರೀ ಬಿ. ಡಿ. ಜತ್ತಿ.—ನಮ್ಮಲ್ಲಿ ಬ್ರಾಡ್ ಕಾಸ್ಟಿಂಗ್ ಬಂದರೆ ನಾವೂ ಆ ರೀತಿ ಮಾಡುತ್ತೇವೆ. ಓಡಾಡಿ ಕಷ್ಟಪಡಬೇಕೆಂದು ಯಾರಿಗೂ ಇಚ್ಛೆ ಇಲ್ಲ. ಸುಲಭವಾಗಿ canvas ಮಾಡುವುದು ಎಲ್ಲರಿಗೂ ಬೇಕು.

ಶ್ರೀ ವರ್ಮಾ ವಿ. ಶ್ರೀನಿವಾಸಶೆಟ್ಟರು ಮಾತನಾಡುವಾಗ ಒಂದು ಸರಿಯಾದ ವಿಷಯ ಹೇಳಿದರು. ಮುಖ್ಯ ಮಂತ್ರಿಗಳು, ಮಂತ್ರಿಗಳು, ಉಪಮಂತ್ರಿಗಳು ಯಾರೇ ಆಗಲೀ, ಪ್ರಚಾರ ಮಾಡುವ ಕಾಲಕ್ಕೆ ಸರ್ಕಾರ ಕೊಟ್ಟಂಥ ಕಾರ್ ಉಪಯೋಗ ಮಾಡಬಾರದು. ಸರ್ಕಾರದ ಕಾರ್

ಉಪಯೋಗಮಾಡಿ ಸರಕಾರದವರಿಂದ ಟಿ. ಎ. ಮತ್ತು ಡಿ. ಎ. ತೆಗೆದುಕೊಂಡು ಪ್ರಚಾರ ಮಾಡುವುದಕ್ಕೆ ಹೋಗಬಾರದು ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

Sri C. M. ARUMUGHAM.—Now you have accepted 50 per cent of the Resolution.

ಶ್ರೀ ಬಿ. ಡಿ. ಜತ್ತಿ.—ನಾನು ಹೇಳಿದ ತತ್ವ ಏನೆಂದರೆ ಮಂತ್ರಿಯಾದವರು, ಮುಖ್ಯ ಮಂತ್ರಿಯಾದವರು ತಮ್ಮ ಅಧಿಕಾರವನ್ನು ಖಾಸಗೀ ಕಾರ್ಯಗಳಿಗೆ ಉಪಯೋಗ ಮಾಡುವಂಥಾದ್ದು ಸರಿಯಲ್ಲ. ಆ ರೀತಿ ಮಾಡಬಾರದು. ಮಂತ್ರಿಮಂಡಲದಲ್ಲಿ ಯಾರು ಆ ರೀತಿ ಮಾಡಬಾರದು ಎಂದು ಹೇಳುತ್ತೇನೆ ಯಾರು ಆ ರೀತಿ ಉಪಯೋಗ ಮಾಡಿಕೊಂಡೂ ಇಲ್ಲ. ಪ್ರಚಾರಕಾರ್ಯಕ್ಕೆ ಹೋದಾಗ ಮಂತ್ರಿಗಳು ಎಂದು ಹೋಗುವುದಿಲ್ಲ. ಕಾಂಗ್ರೆಸ್ ಎಂ. ಎಲ್. ಎ. ಎಂದು ತಿಳಿದುಕೊಂಡು ಹೋಗುತ್ತಾರೆ. ಹಾಗೆ ಮಾಡುವಾಗ ಅವರು ತಮ್ಮ ಕೈಯಿಂದ ಖರ್ಚು ಮಾಡಿಕೊಂಡು ಹೋದರೆ ಕಾನೂನಿಗೆ ವಿರೋಧ ವಾಗುವುದಿಲ್ಲ. ಇದರ ಬಗ್ಗೆ ಯಾರಾದರೂ ಆಕ್ಷೇಪಣೆ ಮಾಡುವುದು ಸರಿಯಲ್ಲ. ಯಾರು ಈ ರೀತಿ ಮಾಡುವುದನ್ನು ವಿರೋಧ ಮಾಡಬಾರದೆಂದು ಹೇಳುತ್ತೇನೆ. ನಾನು ಈ ತತ್ವವನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆ.

ಶ್ರೀ ಬಿ. ಕೆ. ನಾಗೂರ್.—ತಾವು ಖಾಸಗಿಯಾಗಿ ಬಿಜಾಪುರ, ಧಾರವಾಡ ಜಿಲ್ಲೆಗಳಿಗೆ ಬಂದರೆ, ಮುಖ್ಯಮಂತ್ರಿಗಳು ಬಂದರು ಎಂದು ಜನ ಹೇಳುತ್ತಾರೆ. ಶ್ರೀಮಾನ್ ಜತ್ತಿಯವರು ಬಂದಿದ್ದಾರೆ ಎಂದು ಯಾರೂ ಹೇಳುವುದಿಲ್ಲ.

ಶ್ರೀ ಬಿ. ಡಿ. ಜತ್ತಿ.—ಅದು ಅನಿವಾರ್ಯ ಆರು ಗಂಟೆ ಕಾಲ ಮುಖ್ಯಮಂತ್ರಿ, ಮೂರು ಗಂಟೆ, ಕಾಲ ಅಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೂ ಮುಖ್ಯಮಂತ್ರಿ ಸ್ಥಾನದಲ್ಲಿ ಕೊನೆಯೋ ಅಲ್ಲಿಯವರೆಗೂ ಮುಖ್ಯಮಂತ್ರಿ ಎಂದೇ ಕರೆಯುತ್ತಾರೆ. ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಅದು ಅಭ್ಯಾಸ. ಮಾನ್ಯ ಸದಸ್ಯರನ್ನು ಡಾಕ್ಟರ್ ನಾಗೂರ್ ಎಂದೇ ಕರೆಯುತ್ತೇನೆ. ಅವರು ಎಂ. ಬಿ. ಬಿ. ಎಸ್., ಎಫ್. ಆರ್. ಸಿ. ಎಸ್. ಯಾವುದು ಆಗಿಲ್ಲ ಆದರೂ ಡಾಕ್ಟರ್ ಎಂದೇ ಕರೆಯುತ್ತೇನೆ.

ಶ್ರೀ ಬಿ. ಕೆ. ನಾಗೂರ್.—ನಾನು ಆಯುರ್ವೇದ ಪಂಡಿತನಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ನನಗೆ ವೈಯುಕ್ತಿಕವಾಗಿ ಅವರ ಪರಿಚಯ ಹೆಚ್ಚು. ಅವರು ಆಯುರ್ವೇದ ಪಂಡಿತ ರಾದರೂ ಡಾಕ್ಟರ್ ಎಂದು ಕರೆಯುವುದೇ ಅಭ್ಯಾಸವಾಗಿದೆ. ನಾನು ಮುಖ್ಯಮಂತ್ರಿ ಸ್ಥಾನದಲ್ಲಿರುವಾಗ, ನನ್ನ ಕೈಯಿಂದ ಖರ್ಚುಮಾಡಿ ಪ್ರವಾಸ ಮಾಡಲು ಹೋದರೂ ಕೂಡ, ಮುಖ್ಯಮಂತ್ರಿ ಜತ್ತಿಯವರು ಬಂದರು ಎಂದರೆ ನಾನು ಏನು ಮಾಡುವುದಕ್ಕಾಗುತ್ತದೆ? ಇವೊತ್ತಿನ ದಿವಸ ಅಧಿಕಾರದಲ್ಲಿರುವ ಆಡಳಿತ ಪಕ್ಷದಲ್ಲಿ ಯಾರೇ ಆಗಲೀ ಸರಕಾರದ ಕೆಲಸದ ಮೇಲೆ ಪ್ರವಾಸ ಮಾಡಿದರೆ ಸರಕಾರದಿಂದ ಟಿ. ಎ., ಡಿ. ಎ. ಪಡೆಯುತ್ತಾರೆ ಎನ್ನುವುದು ಅಷ್ಟು ಮುಖ್ಯವಲ್ಲ. ಇದನ್ನು ವಿಚಾರ ಮಾಡುವಾಗ ತತ್ವವನ್ನು ನೋಡಬೇಕು. ಅಧಿಕಾರದಲ್ಲಿ ಯಾರೇ ಇರಲಿ ಅದಕ್ಕೆ ಅಡ್ಡಿ ಮಾಡಬಾರದು. ಇದರ ದೆಸೆಯಿಂದ ಇನ್ನು Clear position ಆಗಿ ಹೇಳುವಾಗ ಕಾಂಗ್ರೆಸ್ ಎಂ. ಎಲ್. ಎ. ಆಗಿ As Congress Member or As Congress Member. ವ್ಯಯುಕ್ತಿಕ ದೃಷ್ಟಿಯಿಂದ ಕಾಂಗ್ರೆಸ್ಸಿನ ಪಕ್ಷದ ಪರವಾಗಿ ಪ್ರಚಾರ ಮಾಡಲಿಕೆ ಯಾವ ತರಹದ ಕಾನೂನಿನ ಪ್ರತಿಬಂಧಕವಿಲ್ಲ. ಈ ರೀತಿ ಮಾಡುವುದು ಸರಿಯಲ್ಲ ಎಂದು ಬೇರೆ ಬೇರೆ ಜನರು ಮಾತನಾಡುವಾಗ ಇದನ್ನು ಹೇಳುವುದು ಸರಿಯೇ ಎಂದು ಅಷ್ಟು ಹೇಳುತ್ತೇನೆ. ಒಂದು ಮಾತನ್ನು ಶ್ರೀಮಾನ್ ರಾಜಯ್ಯ ಶೆಟ್ಟರು ಮಾತನಾಡುವಾಗ ಹೇಳಿದರು. ನಾನೂ ಅದನ್ನು ವಿಚಾರ ಮಾಡಿ ಅದು False ಎನ್ನುವುದು ತಿಳಿದು ಬಂತು. ಆದುದರಿಂದ ನಾನು ಹೇಳುವುದು, ನನ್ನ ಕಡೆಯಿಂದ ಹೇಳುವುದು False ಎನ್ನುವ ಹಾಗಿದ್ದರೆ ನಾನು ನನ್ನಲ್ಲಿರುವ

(ಶ್ರೀ ಬಿ. ಡಿ. ಜತ್ತಿ)

ರಿಕಾರ್ಡುಗಳ ಫೈಲನ್ನು ಸ್ಪೀಕರ್‌ರವರ ಕಡೆಗೆ ಕೊಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ರಾಜಯ್ಯ ಶೆಟ್ಟಿರವರೂ ಅವರ ಕಡೆ ಇರುವ ಕಾಗದಗಳನ್ನು ಸ್ಪೀಕರ್‌ರವರ ಕಡೆಗೆ ಕೊಡಲಿ ಆಗ ಲಾ ಮಿನಿಸ್ಟರು ಹೇಳಿದ್ದು False ಎಂದಾಗುತ್ತದೋ ಇಲ್ಲವೋ ನೋಡಬಹುದು. ನಾನು ಸುಮ್ಮನೆ ವಿರೋಧ ಮಾಡುವುದಿಲ್ಲ. ಫೈಲುಗಳನ್ನು ನೋಡಿ ಸ್ಪೀಕರ ರವರು ಯಾವುದು ಸರಿ ಎನ್ನುತ್ತಾರೋ ಅದನ್ನು ಒಪ್ಪಬಹುದು. ಇಲ್ಲಿ ಸರಿಯಲ್ಲ ಎಂದು ಹೇಳುವುದಕ್ಕಿಂತ facts are facts law is law. ಎನ್ನುವುದು ಎಲ್ಲರಿಗೂ ಯೋಗ್ಯವಾಗಿ ಕಾಣುತ್ತದೆ. ಇವೊತ್ತಿನ ದಿವಸ ಅವರೂ ಲಾ ಮಿನಿಸ್ಟರೂ ಅಲ್ಲ. ಹಿಂದೆ ಮಾಡಿದ್ದುದನ್ನು ನೋಡಿಕೊಂಡು ಈ ರೀತಿಯಾದ ಟೀಕೆ ಅಲಿಗೇಷನು ಮಾಡುವುದು ಬರೀ ಟೀಕೆಯಾಗುತ್ತದೆ. ಈಗೇನೋ ಎಲೆಕ್ಷನು ಬರುತ್ತಿದೆ. ಆಗ ವೋಟರುಗಳು ನಾವು ಇಲ್ಲಿ ಎರಡುಸಾರಿ ಮಿನಿಸ್ಟರಾಗಿ ಬಂದಿದ್ದೇವೆ ಎಂದು ವೋಟನ್ನು ಕೊಡುವುದಿಲ್ಲ. ಅಲ್ಲದೆ ಇವರು ಇಲ್ಲಿ ದೊಡ್ಡ ಮೆಂಬರಾಗಿ ಬಾಯಿಗೆ ಬಂದಂತೆ ಸರಕಾರವನ್ನು ಬಯ್ಯುತ್ತಾ ಇದ್ದವರು ಎಂದು ವೋಟು ಕೊಡುವುದಿಲ್ಲ. ಇವೆಲ್ಲ ಅಶಿಕ್ಷಿತವಾದ ಕಾಂಪ್ಲಿಕೇಟ್ ಪೊಸಿಷನ್ನು ವೋಟುಗಳನ್ನು ಪಡೆದುಕೊಂಡು ಇವರೇ ಬರುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಒಂದು ಹೇಳುತ್ತೇನೆ. ಎರಡು ವಿಚಾರ ಇಲ್ಲಿ ಲೆಕ್ಕಕ್ಕೆ ಬರುತ್ತದೆ. ನಮ್ಮ conscienceಗೆ ಸರಿಯಾಗಿ, ದೇವರ ಸಾಕ್ಷಿಯಾಗಿ ನೀತಿಯುತವಾದ ಪ್ರಕಾರದಲ್ಲಿ ಜನಗಳ ಸೇವೆ ಮಾಡಿದರೆ, ವೋಟನ್ನು ಹಾಕುವವರು ಯಾರಿಗೆ ಹಾಕಬೇಕೆಂದು ಇಚ್ಛೆ ಪಡುತ್ತಾರೋ ಅವರಿಗೆ ಹಾಕುತ್ತಾರೆ. ಜನರೂ ಈಚೆಗೆ ಬುದ್ಧಿವಂತರಾಗುತ್ತಿದ್ದಾರೆ. ಈಗ ನಾನು ಕಾಂಗ್ರೆಸ್ಸಿನವನು ಎಂದು ಸ್ವಲ್ಪ ಹೆಚ್ಚಿನ ಖರ್ಚು ಮಾಡಿದ್ದಾರೆ ಎಂದು ನನಗೆ ವೋಟು ಕೊಡುತ್ತಾರೆಯೇ? ಕೈ ಕೊಡುತ್ತಾರೆ. ಜನರು ಅಷ್ಟು ದಡ್ಡರಲ್ಲ. ಎಂದು ನನಗಾದರೋ ಅನಿಸುತ್ತದೆ. ನಮ್ಮ ಸ್ನೇಹಿತರಾದ ಶ್ರೀಮಾರ್ಕ ರಾಜಯ್ಯ ಶೆಟ್ಟರವರು ಹೇಳುವಾಗ 20 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡುತ್ತಾರೆಂದರು. ಕಾಂಗ್ರೆಸ್ಸಿನ ಆರ್ಗನೈಸೇಷನ್ನಿನವರು 20 ಲಕ್ಷ ರೂಪಾಯಿಗಳ ನಿಧಿಯನ್ನು ಕಾಂಗ್ರೆಸ್ಸಿನ ಪಕ್ಷದ ಪ್ರಚಾರಕ್ಕೋಸ್ಕರ ವಸೂಲು ಮಾಡಿದರೆ ಸರಕಾರಕ್ಕೂ ಇದಕ್ಕೂ ಹೇಗೆ ಸಂಬಂಧ ಪಡುತ್ತದೆ ಎನ್ನುವುದು ಗೊತ್ತಾಗಲಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಮ್ಮ ಪಕ್ಷದವರೂ ಕಲೆಕ್ಟು ಮಾಡುತ್ತಾರೆಂದು ಹೇಳಿದೆ.

ಶ್ರೀ ಬಿ. ಡಿ. ಜತ್ತಿ.—ಮಾಡಲಿ, ಪಕ್ಷ, ಪ್ರತಿ ಪಕ್ಷಗಳಲ್ಲಿ ವಿರೋಧ ಮಾಡುತ್ತೇವೆಂದಲ್ಲ. ಇವೊತ್ತು ನಾವು ಅಧಿಕಾರದಲ್ಲಿರಬಹುದು. ಇನ್ನೊಂದು ದಿವಸ ನೀವೂ ಅಧಿಕಾರಕ್ಕೆ ಬರುತ್ತೀರಿ. ಇದು ಪಾರ್ಟಿ ಡೆಮಾಕ್ರೆಸಿಯ ಪ್ರಕಾರ ಯಾವ ಪಾರ್ಟಿಗೆ ಹೆಚ್ಚಿನ ವೋಟುಗಳು ಬರುತ್ತವೋ ಅವರು ಅಧಿಕಾರಕ್ಕೆ ಬರುತ್ತಾರೆ. ಆ ಪಕ್ಷದವರು ತಮ್ಮ ಪಕ್ಷದ ಬೆಳವಣಿಗೆಗಾಗಿ ಹಣವನ್ನು ಕಲೆಕ್ಟು ಮಾಡುತ್ತಾರೆ. ಇದಕ್ಕೂ ಸರಕಾರಕ್ಕೂ ಒಂದು ಮಹತ್ವ ಮಾಡಿ ಇಲ್ಲಿ ಇಷ್ಟು ಹಣವನ್ನು ಎಂದರೆ 20 ಸಾವಿರದಷ್ಟು ವಸೂಲು ಮಾಡುವ ಸಂಬಂಧವನ್ನು ಏಕೆ ಯೋಚನೆ ಮಾಡಿದರೋ ಗೊತ್ತಿಲ್ಲ. ಪಕ್ಷಕ್ಕಾಗಿ ಪ್ರಚಾರ ಮಾಡುವುದು ಬೇರೆ ಸರಕಾರಕ್ಕೂ ಇದಕ್ಕೂ ಏನು ಸಂಬಂಧ ಇಷ್ಟು Clearಆಗಿ ನಾನು ಆಗಲೇ ಹೇಳಿದ್ದಂತೆ ನಿಯಮದ ಪ್ರಕಾರ ನಾವು ಮಾಡುತ್ತಿದ್ದೇವೆ. ಎಲೆಕ್ಷನ್ನಿನಲ್ಲಿ ತಪ್ಪಾಗಿದೆ ಎನ್ನುವುದಾಗಿದ್ದರೆ ಎಲೆಕ್ಷನು ಕಮಿಷನ್ನಿದೆ ಈ ಎಲೆಕ್ಷನ್ನು ಕಮಿಷನ್ ಸಂಸ್ಥೆಯಿಂದ ತಪ್ಪಾಗಿದೆ, ಕಾನೂನು ಪ್ರಕಾರ ತಪ್ಪಾಗಿದ್ದರೆ ಎಲೆಕ್ಷನ್ನು ರೂಲ್ಸ್ ಪ್ರಕಾರ ಅಂತಹವರನ್ನು ತೆಗೆದು ಹಾಕುತ್ತಾರೆ. ಇದರ ಬಗ್ಗೆ ನಾವೇಕೆ ಇಲ್ಲಿ ಚರ್ಚೆ ಮಾಡಬೇಕು.

ಆದುದರಿಂದ ಶ್ರೀವರ್ಗನ್ ನರಸಿಂಹನ್ ತಂದಿರುವ ಗೊತ್ತುವಳಿಯನ್ನು ವಿರೋಧಿಸುತ್ತೇನೆ. ಅವರು ಇದನ್ನು ವಾಪಸ್ ತೆಗೆದುಕೊಳ್ಳುತ್ತಾರೋ ಏನೋ ನನಗೆ ಗೊತ್ತಿಲ್ಲ. ಈಗಾಗಲೇ ಹೇಳಿದಂತೆ ಇದರಲ್ಲಿ ಏನೂ ಆಗುವುದಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಮಾನ್ಯ ಅಧ್ಯಕ್ಷರೇ, ಈ ಗೊತ್ತುವಳಿಯ ಮೇಲೆ ಉತ್ತರ ಕೊಡುತ್ತಾ ಮುಖ್ಯಮಂತ್ರಿಗಳು ಒಂದು ಮುಖ್ಯವಾದ ವಾದವನ್ನು ಎತ್ತಿ ಹಿಡಿದಿದ್ದಾರೆ. ಅದು ನನಗೆ ಅಷ್ಟು ಸಮಂಜಸವಾಗಿ ಕಂಡು ಬರುವುದಿಲ್ಲ. ಅವರ ಮುಖ್ಯ ವಾದದ ಸರಣಿಯಲ್ಲಿ ಕಾನೂನಿನಲ್ಲಿ ಯಾವ ತರಹದ ಅಡ್ಡಿಯಿಲ್ಲ ಎನ್ನುವ ಅಂಶವು ಕಂಡುಬಂದಿತು. ಹಾಗಿದ್ದರೆ ಪ್ರಚಾರ ಮಾಡಲಿಕ್ಕೆ Representation of People's Act, ನಲ್ಲಾಗಲಿ, ಕಾನ್ಸ್ಟಿಟ್ಯೂಷನ್ನಿನಲ್ಲಾಗಲೀ ಯಾವ ಪ್ರತಿಬಂಧಕವೂ ಇಲ್ಲ. ಹಾಗೆ ಪ್ರತಿಬಂಧಕ ಇದ್ದಿದ್ದರೆ ನಾನು ಈ ತರಹ ರೆಸಲ್ಯೂಷನ್ನನ್ನು ತರುವ ಅಗತ್ಯವೇ ಇರಲಿಲ್ಲ. ಈ ರೆಸಲ್ಯೂಷನ್ನನ್ನು ತರುವ ಅಗತ್ಯವೇಕೆಂದರೆ; ಕಾನೂನಿನಲ್ಲಿಲ್ಲ, ಕಾನ್ಸ್ಟಿಟ್ಯೂಷನ್ನಿನಲ್ಲಿಲ್ಲ ಎನ್ನುವುದು ಸ್ಪಷ್ಟವಾಗಿಯೇ ಇದೆ. ಈ ವಿಷಯದ ಬಗ್ಗೆ ಯಾವ ನಿಯಮವೂ ಇಲ್ಲ, ಈ ಸಭೆಯ ಅಭಿಪ್ರಾಯವನ್ನು ತಿಳಿದು ಕೊಳ್ಳಬೇಕು. ಮತ್ತು ಈ ಸಭೆಯ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಬೇಕೆಂದು ಈ ವಿಷಯವನ್ನು ಹೇಳಿ ನಾನು ತಂದಿದ್ದೇನೆ.

ಸ್ವಾಮಿ, ಈ ಕಾನೂನಿನಲ್ಲಿ ಸಂಬಂಧವಿಲ್ಲ ಎಂದರೂ ಈ ರೀತಿ ತರಲು ಸಂಪೂರ್ಣ ಅವಕಾಶ ವಿದೆ. ಕಾನೂನಿನಲ್ಲಿ ಇನ್ನು ಏನೇನೋ ಇದೆ. ಇದನ್ನು ಇಲ್ಲವೆಂದು ಬಳಸಿಕೊಳ್ಳುತ್ತಾರೆ. ನಮ್ಮ ಮುಖ್ಯವಾದ ಆರೋಪಣೆಗಳು ಈ ಕಾನೂನಿನ ಹಿಡಿತದೊಳಗೇ ಇದೇ ಎಂದಲ್ಲ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸ ಶೆಟ್ಟಿಯವರು ಈಗ ತಾನೇ ಹೇಳಿದಂತೆ ಇದನ್ನು ಕೇವಲ ಕಾನೂನಿನ ದೃಷ್ಟಿಯಿಂದ ನೋಡಕೂಡದು, ನಮ್ಮ ದೇಶದಲ್ಲಿರುವ ಪ್ರಭುತ್ವವನ್ನು ನೋಡುವಾಗ ಯಾವಾಗಲೂ ಹೊರದೇಶಗಳಲ್ಲಿರುವುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು. ಆದರೆ ಇಂಗ್ಲೆಂಡಿನಂತೆ ಅಮೆರಿಕದಲ್ಲಿನಂತೆ ಈ ದೇಶಕ್ಕೆ ಹೋಲಿಸುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಶ್ರೀಮಾನ್ ಶ್ರೀನಿವಾಸ ಶೆಟ್ಟರು ಉಲ್ಲೇಖಿಸಿದ್ದಾರೆ. ಆದರೆ ಮುಖ್ಯಮಂತ್ರಿಗಳು ಮಾತನಾಡುವಾಗ ಈ ಬಗ್ಗೆ ಯಾವ ಒಂದು ವಿವರಣೆಯನ್ನು ಕೊಡಲಿಲ್ಲ. ಅಮೆರಿಕಾದಲ್ಲಿ ಚುನಾವಣೆ ನಡೆಯುವಾಗ ಅಲ್ಲಿ ಅಧ್ಯಕ್ಷರ ಪರವಾಗಿ ಚುನಾವಣೆ ಮಾಡಲು ಯಾವ ಕಾನೂನಿನಂತೆ ಪ್ರಚಾರಕ್ಕೆ ಹೋಗುತ್ತಿದ್ದರು ಎನ್ನುವುದನ್ನು ನಾವು ಪತ್ರಿಕೆಗಳಲ್ಲಿ ಹೇಳಿರು ವುದನ್ನು ಎಲ್ಲರೂ ನೋಡಿರಬಹುದು. ಅದೇಕೆಂದರೆ ಆರೋಪಣೆಗಳು ಬೇರೆ ಪ್ರಾಂತಗಳಲ್ಲಿ ಚುನಾವಣೆಗಳಾಗುವಾಗ ಬರಬಹುದು ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು, ಈ ತರಹ ವಿಷಯ ಬರಬಾರದು ಎಂದು ಒಂದು ಸಣ್ಣ ನಿಯಮದಿಂದ—ಅದೇನೂ ಕಷ್ಟವಾದ ನಿಯಮವಲ್ಲ ನಮ್ಮ ಮಿನಿಸ್ಟರುಗಳು ಪ್ರಯೋಗಿಕವಾಗಿಯಾದರೂ ಎರಡು ತಿಂಗಳು ಕಾಲ ಎಂದು ಹೇಳಿದ್ದೇನೆ. ಒಂದು ತಿಂಗಳಾದರೂ ಪರವಾಗಿಲ್ಲ. ಅಥವಾ ಎರಡೋ ಮೂರೋ, ಒಂದು ತಿಂಗಳು ಎಂದು ಇಟ್ಟುಕೊಳ್ಳಲಿ. ಇದರಲ್ಲಿ ಅಡಗಿರುವ ತತ್ವವನ್ನು ಅವರು ಸಾಧುವಾದುದು, ನ್ಯಾಯವಾದುದು; ಒಪ್ಪಿಕೊಳ್ಳಬಹುದು, ಈ ರೀತಿ ಯಾವ ಸೂಚನೆಯನ್ನು ನೀಡಬಹುದು ಎಂದು ನಾನು ಇಲ್ಲಿ ಇದನ್ನು ಮಂಡಿಸಿದ್ದೆ. ಆದರೆ ಮುಖ್ಯಮಂತ್ರಿಗಳು ಈಗಿರುವ ಮನಸ್ಸಿಲ್ಲದ ಪ್ರೊಹಿಬಿಷನ್ ನೀತಿಯಂತೆ ಇಷ್ಟು ದೊಡ್ಡ ವಿಷಯದಲ್ಲಿ ಕರ್ಣಾಟಕ ರಾಜ್ಯದ ಪ್ರತಿಯೊಂದು ಕಾನ್ಸ್ಟಿಟ್ಯುಯೆನ್ಸಿಗೆ ಹೋಗುವು ದಕ್ಕೆ ಸಾಧ್ಯವೇ, ಹೋಗುವುದು ಸಾಧ್ಯವಿಲ್ಲ ಎಂದು ಅವರು ನಿಯಮಗಳನ್ನು ಉಲ್ಲೇಖಿಸಿಲ್ಲ, ಬೇರೆ ಯಾವ ದೂರದೃಷ್ಟಿಯೂ ಇಲ್ಲ ಎಂದು ಹೇಳುತ್ತಾ, ಅವರು Fail ಅಲ್ಲ ಎಂದರು: ಅಲ್ಲದೆ ಈಗ ಒಂದು ಚುನಾವಣೆ ಬರುತ್ತಿದೆ. ಅದಕ್ಕೋಸ್ಕರ ಒಂದು ಸ್ಟಂಟು ಮಾಡುವುದಕ್ಕೋಸ್ಕರ ಈ ರೀತಿ ತಂದು ಸರಕಾರಕ್ಕೆ ಮಸಿ ಬಳಿಯುವುದಕ್ಕೋಸ್ಕರ ತರುತ್ತಿದ್ದಾರೆ ಎನ್ನುವಂತೆ ಆರೋ ಪಣೆಯ ಮಾತನ್ನು ಹೇಳುವುದು ಸಾಧುವಾದುದಲ್ಲ. ಸರಕಾರದ ಬಗ್ಗೆ ಹೇಳಬೇಕಾದರೆ ಇದೊಂದೇ ವಿಷಯದಲ್ಲಿ ಇರುವುದು ಬೇಕಾದಷ್ಟಿದೆ. ಈಗ ಲೆಜಿಸ್ಲೇಟರು ಹೋಂ ಪ್ರಕರಣವನ್ನೇ ಹೇಳುವುದಕ್ಕೆ ಹೋದರೆ ಬೇಕಾದಷ್ಟು ಹೇಳಬಹುದು. ಇಂತಹ ಒಂದು ಬ್ರಹ್ಮಾಸ್ತ್ರವನ್ನು ಇಲ್ಲಿ ಸ್ವಲ್ಪ ಉತ್ಪ್ರೇಕ್ಷೆಯಿಂದ ಆರೋಪಣೆ ಮಾಡುತ್ತಾರೆ. ಆದುದರಿಂದ ಇದು ವಿರೋಧ ಪಕ್ಷದವರು ಈ

(ಶ್ರೀ ಎಂ. ಸಿ. ನರಸಿಂಹನ್)

ಅಸ್ತ್ರವನ್ನು ಹೊಸದಾಗಿ ಅವರ ಸಹಕವನ್ನು ತೋರಿಸುವುದಕ್ಕಾಗಿ ತಂದಿದ್ದಾರೆ ಎಂದು ಸರಕಾರ ನೋಡುವುದು ಸಾಧ್ಯವಾದುದಲ್ಲ. ಈ ರೀತಿಯಾಗಿ ಒಂದು ನಿಯಮವಿರಬೇಕು, ಎಂದು ಹೇಳಿದೆಯೇ ಹೊರತು ಬೇರೆನಲ್ಲ.

ನಾನು ಮೊದಲೇ ಆರಂಭದಲ್ಲಿ ಹೇಳಿದೆ. ಕೇರಳದಲ್ಲಿ ಕಮ್ಯೂನಿಸ್ಟ್ ಮಿನಿಸ್ಟ್ರಿ ಇದ್ದಾಗ್ಗೆ ಈ ರೀತಿ ಚುನಾವಣೆ ಸಮೀಪಿಸುತ್ತಿದ್ದಾಗ ಯಾವ ಪಕ್ಷವೇ ಆಗಲಿ ತಮ್ಮ ಪಾರ್ಟಿ ಕಡೆ ಒತ್ತಾಯ ಮಾಡಲಿಕ್ಕೆ ಹೋಗುತ್ತಿರಲಿಲ್ಲ. ಇದು ಎಲ್ಲಾ ಪಕ್ಷಗಳಿಗೂ ಅನ್ವಯಿಸುವ ಪ್ರಶ್ನೆಯಾಗಿರುವುದರಿಂದ ಈ ಬಗ್ಗೆ ಬಹಳ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅಗತ್ಯವಿದೆ. ಈ ಪ್ರಜಾ ಸರ್ಕಾರದಲ್ಲಿ ಒಂದು ವೇಳೆ ಸೋಷಿಯಲಿಸ್ಟ್ ಪಾರ್ಟಿ ಅಧಿಕಾರಕ್ಕೆ ಬರುವುದಾದರೆ, ಶ್ರೀಮಾನ್ ಮಲ್ಲಾರಾಧ್ಯ ಅವರಂತಹ ಸ್ನೇಹಿತರು ಅಧಿಕಾರದಲ್ಲಿದ್ದು ಆ ಕಡೆ ಇದ್ದರೆ ಖಂಡಿತವಾಗಿ ಆ ಬಗ್ಗೆ ಒಂದು ಸರಿಯಾದ ನಿರ್ಣಯವನ್ನು ತರುತ್ತಿದ್ದರೆಂದು ನನಗೆ ಗೊತ್ತು. ಆದ್ದರಿಂದ ಈ ಸಂದರ್ಭದಲ್ಲಿ ನನ್ನ ನಿರ್ಣಯದ ಪ್ರಕಾರ ನಡೆಯುವುದು ಅಗತ್ಯವಿದೆ. ಅಂಥಾದ್ದನ್ನು ಯಾವ ರೀತಿಯಲ್ಲೂ ನೋಡಬೇಕಾದುದೇನೂ ಇಲ್ಲ. ಕೇವಲ ಬಹು ಸರಳವಾದ ನಿಯಮ ನನ್ನ ನಿರ್ಣಯದಲ್ಲಿ ಅಡಗಿದೆ. ಯಾವ ರೀತಿಯ ಪ್ರತ್ಯಾರೋಪಣೆಗಳು ಇದರಲ್ಲಿ ನಡೆಯುವುದಿಲ್ಲವೆಂಬ ದೃಷ್ಟಿಯಿಂದ ಇದನ್ನು ತಮ್ಮ ಮುಂದಿಟ್ಟಿದ್ದೇನೆ. ಆದ್ದರಿಂದ ನನ್ನ ಸಲಹೆಗಳನ್ನೆಲ್ಲಾ ಸರ್ಕಾರದವರು ಚೆನ್ನಾಗಿ ಪರಿಶೀಲಿಸಿ ಕಾರ್ಯಗತ ಮಾಡುತ್ತಾರೆಂದು ನಂಬಿ ನಾನು ನನ್ನ ನಿರ್ಣಯವನ್ನು ವಿತ್‌ಡ್ರಾ ಮಾಡಬೇಕಾಗಿದೆ.

Mr. DEPUTY SPEAKER.—The question is:

"That this Assembly is of the opinion that Ministers should not undertake during the period of two months preceding the last date of polling during the General Elections any propagandist activity in support of candidates in the said General Elections belonging to their own political party or parties provided that this shall not deprive the Ministers of the right to do anything permitted by law in support of their own individual candidature in the General Elections and in their respective constituencies."

The resolution was negatived.

NON-OFFICIAL RESOLUTION *Re*: RENAMING OF MYSORE STATE AS KARNATAKA STATE.

Sri BASANGOWDA (Lingsugur).—Sir, I beg to move:

"That this Assembly is of the opinion that recommendation be made to the Government of India to take necessary steps urgently to change the present name of Mysore State to Karnataka State."

Mr. DEPUTY SPEAKER.—Resolution moved:

"That this Assembly is of the opinion that recommendation be made to the Government of India to take necessary steps urgently to change the present name of Mysore State to Karnataka State."